01 February 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಪ್ರತಿ ವಿಷಯದಲ್ಲೂ ಬೇಗ ಜಾಗೃತಗೊಳ್ಳುವುದು ತುಂಬಾ ಉತ್ತಮ! ಅದು ಭ್ರಮೆಯಿಂದಾಗಲಿ ಅಥವಾ ಅಹಂನಿಂದಾಗಲಿ!

-ಸ್ನೇಹಾ ಆನಂದ್

info.varthaman@gmail.com



ಅಕ್ರಮ ರೆಸಾರ್ಟ್‌ಗಳ ನಿರ್ಮಾಣ ಆರೋಪ: ದಾಖಲೆಗಳ ಪರಿಶೀಲನೆ ಪುಟ ಸಂ. 2



1880 ಎಕರೆ ಸರ್ಕಾರಿ ಭೂಮಿ ಕಾಣೆ: ರೈತ ಸಂಘ ಆರೋಪ ಪುಟ ಸಂ. 3



ದಂಟಳ್ಳಿ ಏತ ನೀರಾವರಿ ಯೋಜನೆಗೆ ಡಿ.ಪಿ.ಆರ್ ಮಾಡುವಂತೆ ಆಗ್ರಹ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 88 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ದಂಪತಿ ಮೇಲೆ ಚಿರತೆ ದಾಳಿ



**ಮೈಸೂರು:** ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇಲೆ ಚಿರತೆ ದಾಳಿ ನಡೆಸಿದ ಘಟನೆ ನಂಜನಗೂಡು ತಾಲೂಕಿನ ಚುಂಚನಹಳ್ಳಿ ಬಳಿ ನಡೆದಿದೆ. ಚಿರತೆ ದಾಳಿಯಿಂದ ಬೈಕ್‌ನಲ್ಲಿದ್ದ ದಂಪತಿ ಮತ್ತು ಮಗು ಗಂಭೀರವಾಗಿ ಗಾಯಗೊಂಡಿದ್ದಾರೆ.

ಚುಂಚನಹಳ್ಳಿ ಗ್ರಾಮದ ಮಹದೇವ ಸ್ವಾಮಿ ಅವರ ಪತ್ನಿ ಹಾಗೂ ಮಗು ಗಂಭೀರ ಗಾಯಗೊಂಡವರು. ಗಾಯಾಳುಗಳಿಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳೀಯರು ದಾಳಿ ನಡೆಸಿದ ಚಿರತೆಯನ್ನು ಸೆರೆ ಹಿಡಿಯಬೇಕು ಎಂದು ಅರಣ್ಯ ಇಲಾಖೆಯನ್ನು ಆಗ್ರಹಿಸಿದ್ದಾರೆ.


## ಮತ್ತೊಬ್ಬ ಪಿಎಸ್‌ಐ ಲೋಕಾಯುಕ್ತ ಬಲೆಗೆ



**ತುಮಕೂರು:** ವಶಕ್ಕೆ ಪಡೆದಿದ್ದ ವಾಹನ ಬಿಡುಗಡೆ ಮಾಡಲು ಲಂಚ ಪಡೆಯುತ್ತಿದ್ದ ಸಂದರ್ಭದಲ್ಲಿ ತುಮಕೂರು ಗ್ರಾಮಾಂತರ ಪಿಎಸ್‌ಐ ಚೇತನ್ ಕುಮಾರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಬೆಂಗಳೂರಿನ ವಕೀಲರ ವಾಹನ ಬಿಡುಗಡೆಗೆ 1 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಕ್ಯಾತಸಂದ್ರ ಬಳಿಯ ನಮಸ್ತೆ ತುಮಕೂರು ಹೋಟೆಲ್‌ನಲ್ಲಿ 40 ಸಾವಿರ ರೂ. ಲಂಚ ಪಡದುಕೊಳ್ಳುತ್ತಿದ್ದಾಗ ಪಿಎಸ್‌ಐ ಚೇತನ್ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಪಿಎಸ್‌ಐ ಅನ್ನು ಬಂಧಿಸಿ ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಚೀಟಿ ಅವ್ಯವಹಾರ ಪ್ರಕರಣದಲ್ಲಿ ಲಂಚ ಸ್ವೀಕರಿಸುವಾಗ ನಿನ್ನೆ ಬೆಂಗಳೂರಲ್ಲಿ ಇನ್‌ಸ್ಪೆಕ್ಟರ್ ಗೋವಿಂದರಾಜು ಲೋಕಾಯುಕ್ತ ಬಲೆಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದರು. ಸಿನಿಮೀಯ ರೀತಿಯಲ್ಲಿ ಇನ್‌ಸ್ಪೆಕ್ಟರ್‌ರನ್ನು ಲೋಕಾಯುಕ್ತ ಅಪ್ ಮಾಡಿತ್ತು.



## ಚಿನ್ನ, ಬೆಳ್ಳಿ ದರ ಭಾರೀ ಕುಸಿತ

**ಬೆಂಗಳೂರು:** ಸತತವಾಗಿ ಏರಿಕೆ ಹಾದಿಯಲ್ಲಿದ್ದ ಚಿನ್ನ ಮತ್ತು ಬೆಳ್ಳಿಯ ದರ ಕಳೆದ 2 ದಿನಗಳಲ್ಲಿ ಭಾರೀ ಕುಸಿತ ಕಂಡಿದೆ. ಕೇಂದ್ರ ಬಜೆಟ್‌ಗೂ ಮುನ್ನವೇ ಕಳೆದ 2 ದಿನಗಳಲ್ಲಿ ಚಿನ್ನ 10 ಗ್ರಾಮ್‌ಗೆ 1.5 ಲಕ್ಷ ರೂ.ಗೆ ಕುಸಿದಿದೆ. ಬೆಳ್ಳಿಯ ಬೆಲೆ 4 ಲಕ್ಷ ರೂ.ನಿಂದ 3 ಲಕ್ಷಕ್ಕೆ ಭಾರೀ ಕುಸಿತ ಕಂಡಿದೆ.

ಇದು ವ್ಯಾಪಾರಿಗಳನ್ನು ನಿರಾಸೆಗೊಳಿಸಿದೆ. ಚಿನ್ನ-ಬೆಳ್ಳಿ ಖರೀದಿಸುವ ಗ್ರಾಹಕರಿಗೆ ಫುಲ್ ಖುಷ್ ನೀಡಿದೆ. 2 ದಿನಗಳ ಹಿಂದೆ 4 ಲಕ್ಷ ರೂ. ಇದ್ದ ಕೆಜಿ ಬೆಳ್ಳಿ ಬೆಲೆ ಶನಿವಾರ ಶೇ.30ರಷ್ಟು ಕುಸಿತ ಕಂಡಿದೆ. ಕೆಜಿ 3 ಲಕ್ಷ ರೂ.ಗಳಿಗೆ ಇಳಿಕೆಯಾಗಿದೆ. ಇನ್ನೂ 1.93 ಲಕ್ಷ ರೂ.ಗೆ ತಲುಪುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದ್ದ ಚಿನ್ನದ ದರ 10 ಗ್ರಾಮ್‌ಗೆ ಇಂದು 1,50,849 ರೂ.ಗಳಿಗೆ ಕುಸಿದಿದೆ.

## ಅನುಮಾನಾಸ್ಪದ ಸ್ಫೋಟ: ನಾಲ್ವರ ಸ್ಥಿತಿ ಗಂಭೀರ

**ಬೀದರ್:** ಅನುಮಾನಾಸ್ಪದ ವಸ್ತು ಸ್ಫೋಟಗೊಂಡು 6 ಜನರು ಗಾಯಗೊಂಡಿದ್ದಾರೆ. ಇವರಲ್ಲಿ ಒಬ್ಬ ಬಾಲಕ ಸೇರಿದಂತೆ ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ಹುಮ್ನಾಬಾದ್ ತಾಲೂಕಿನ ಮೋಳಕೇರಾ ಗ್ರಾಮದಲ್ಲಿ ನಡೆದಿದೆ. ಮೂವರ ಮುಖ, ಮೈ, ಕೈ ಸುಟ್ಟುಹೋಗಿದೆ. ಎಲ್ಲರನ್ನೂ ಬ್ರೀಮ್ಸ್ ಆಸ್ಪತ್ರೆ ದಾಖಲಿಸಲಾಗಿದೆ.

ಅನ್ವರ್ ಪಾಷಾ ಎಂಬ ಯುವಕನ ಸ್ಥಿತಿ ಗಂಭೀರವಾಗಿದೆ. ಆತನನ್ನು ಹೆಚ್ಚಿನ ಚಿಕಿತ್ಸೆಗೆ ಹೈದ್ರಾಬಾದ್‌ಗೆ ರವಾನೆ ಮಾಡಲಾಗಿದೆ. ವಸ್ತು ಬ್ಲಾಸ್ಟ್ ಆದಾಗ ಪಕ್ಕದಲ್ಲೇ ಆರು ಜನ

ಮಕ್ಕಳು ಮತ್ತು ಇಬ್ಬರು ಯುವಕರು ನಿಂತಿದ್ದರು. ಮತ್ತೊಬ್ಬ ಗಾಯಾಳು ಜಬ್ಬಾರ್ ಸಾಬ್ (65) ಎಂಬವರನ್ನು ಸೋಲ್ಲಾಪೂರ್

### ರಾಜಸ್ಥಾನದ ನಾಲ್ವರ ಬಂಧನ | 10 ಕೋಟಿಗೂ ಅಧಿಕ ಬೆಲೆಯ ಡ್ರಗ್ಸ್ ವಶ

# ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆ

### ಕೇಂದ್ರದ ಎನ್‌ಸಿಬಿ ಅಧಿಕಾರಿಗಳ ದಾಳಿ | ಮೈಸೂರು ಪೊಲೀಸರಿಗೆ ಮುಖಭಂಗ

**ಮೈಸೂರು:** ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಮತ್ತೊಂದು ಡ್ರಗ್ಸ್ ಫ್ಯಾಕ್ಟರಿಯನ್ನು ಕೇಂದ್ರದ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ (ಎನ್‌ಸಿಬಿ) ಪತ್ತೆ ಹಚ್ಚಿದೆ. ನಗರದಲ್ಲಿ ಡ್ರಗ್ಸ್ ತಯಾರಿಕೆ ನಡೆಯುತ್ತಿಲ್ಲ ಎಂದು ಪ್ರತಿಪಾದಿಸಿದ್ದ ಮೈಸೂರು ಪೊಲೀಸರಿಗೆ ಮುಖಭಂಗವಾಗಿದೆ.

ಗುಜರಾತ್ ಮತ್ತು ಕರ್ನಾಟಕದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಬೃಹತ್ ಮಾದಕ ದ್ರವ್ಯ ಜಾಲವನ್ನು ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿ ಭೇದಿಸಿದ್ದಾರೆ. ಸುಮಾರು 10 ಕೋಟಿಗೂ ಅಧಿಕ ಮೌಲ್ಯದ 35 ಕೆಜಿ ಮೆಫೆಡ್ರೋನ್, 1.8 ಕೆಜಿ ಅಫೀಮು ಮತ್ತು 25.6 ಲಕ್ಷ ನಗದು ವಶಕ್ಕೆ ಪಡೆದುಕೊಂಡಿದ್ದಾರೆ. ರಾಜಸ್ಥಾನದ ಜಾಲೋರ್ ಜಿಲ್ಲೆಯ ಮಹೇಂದ್ರ ಕುಮಾರ್ ವಿಷ್ಣೋಯ್ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ ಎಂದು ಎನ್‌ಸಿಬಿ ಅಧಿಕಾರಿಗಳು ಅಧಿಕೃತವಾಗಿ ತಿಳಿಸಿದ್ದಾರೆ.

ನಗರದ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿದ್ದ ಘಟಕದಲ್ಲಿ ಡ್ರಗ್ಸ್ ತಯಾರಿಕೆಗೆ ಅಗತ್ಯವಿರುವ ಅತ್ಯಾಧುನಿಕ ಉಪಕರಣಗಳು ಮತ್ತು ಸಂಪೂರ್ಣ ಪ್ರಯೋಗಾಲಯ ಪತ್ತೆಯಾಗಿದೆ. ಇತ್ತೀಚೆಗೆ ಮುಂಬೈ ಪೊಲೀಸರು ದಾಳಿ ನಡೆಸಿ ನಗರದಲ್ಲಿ ನಡೆಯುತ್ತಿದ್ದ ಡ್ರಗ್ಸ್ ಫ್ಯಾಕ್ಟರಿಯನ್ನು ಪತ್ತೆಹಚ್ಚಿದ್ದರು. ಇದರಿಂದ ರಾಜ್ಯ ಸರ್ಕಾರಕ್ಕೆ ತೀವ್ರ ಹಿನ್ನಡೆ ಆಗಿತ್ತು. ಆನಂತರವೂ ಎಚ್ಚೆತ್ತುಕೊಳ್ಳದ ಪೊಲೀಸರು ಅಸಡ್ಡೆ ಮಾಡಿದ್ದರಿಂದ ಎನ್‌ಸಿಬಿ ಅಧಿಕಾರಿಗಳು ದಾಳಿ ಮಾಡಿ ಡ್ರಗ್ಸ್ ತಯಾರಿಕೆ ಘಟಕವನ್ನು ಪತ್ತೆ ಮಾಡಿದ್ದಾರೆ.

ಆರೋಪಿಗಳ ಬಂಧನದ ಬಳಿಕ ಎನ್‌ಸಿಬಿಯ ಬೆಂಗಳೂರು ವಲಯ ಘಟಕವು ಪುಟ 2ಕ್ಕೆ



### ಜೈಲಿನಲ್ಲಿ ಡ್ರಗ್ಸ್ ತಯಾರಿ ತರಬೇತಿ

ಮೈಸೂರು: ಮಾಸ್ಟರ್ ಮೈಂಡ್ ಮಹೇಂದ್ರ ಕುಮಾರ್ ಜೈಲಿನಲ್ಲಿದ್ದಾಗ ಡ್ರಗ್ಸ್ ತಯಾರಿಕೆ ಮಾಡುವುದನ್ನು ಕಲಿತಿದ್ದ. ಜಾಮೀನಿನ ಮೇಲೆ ಹೊರಬಂದ ಬಳಿಕ ಮೈಸೂರಿನಲ್ಲಿ ಈ ರಹಸ್ಯ ಪ್ರಯೋಗಾಲಯ ಸ್ಥಾಪಿಸಿದ್ದ ಎಂದು ಎನ್‌ಸಿಬಿ ತಿಳಿಸಿದೆ. ಈ ಹಿಂದೆ ಅಫೀಮ್ ಮತ್ತು ಸ್ಮ್ಯಾಕ್ ಮಾರಾಟ ಪ್ರಕರಣಗಳಲ್ಲಿ ತೊಡಗಿಸಿಕೊಂಡಿದ್ದ ಆರೋಪಿ ವಿಷ್ಣೋಯ್, ಪುಟ 2ಕ್ಕೆ

### ಪೊಲೀಸ್ ಕಮಿಷನರ್ ಅನುಮಾನಾಸ್ಪದ ಹೇಳಿಕೆ

ಮೈಸೂರು: ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆ ಆಗಿರುವ ಬಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೀಡಿರುವ ಹೇಳಿಕೆಗಳು ಎನ್‌ಸಿಬಿಯ ಅಧಿಕೃತ ಹೇಳಿಕೆಗೆ ವಿರುದ್ಧವಾಗಿದೆ. ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಎನ್‌ಸಿಬಿ ದಾಳಿಯಲ್ಲಿ ಯಾವುದೇ ವಸ್ತು ಪತ್ತೆಯಾಗಿಲ್ಲ ಎಂದು ಗೃಹ ಸಚಿವರು ಹೇಳಿದ್ದಾರೆ. ಪೊಲೀಸ್ ಆಯುಕ್ತೆ ಪುಟ 2ಕ್ಕೆ








### ಗೃಹ ಇಲಾಖೆಯ ವೈಫಲ್ಯ ಬಯಲು ವಿಜಯೇಂದ್ರ ಟೀಕೆ

ಬೆಂಗಳೂರು: ಮೈಸೂರಿನಲ್ಲಿ ರಹಸ್ಯ ಹೈಟೆಕ್ ಡ್ರಗ್ಸ್ ಘಟಕ ಕಾರ್ಯ ನಿರ್ವಹಿಸುತ್ತಿರುವುದನ್ನು ಎನ್‌ಸಿಬಿ ಬಯಲುಗೊಳಿಸಿರುವುದರಿಂದ ರಾಜ್ಯದ ಗೃಹ ಸಚಿವರ ಹಾಗೂ ಗೃಹ ಇಲಾ ಖೆಯ ವೈಫಲ್ಯ ಬಯಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ. ಮೈಸೂರಿನಲ್ಲಿ ರಹಸ್ಯ ಹೈಟೆಕ್ ಡ್ರಗ್ಸ್ ಘಟಕ ಕಾರ್ಯ ನಿರ್ವಹಿಸುತ್ತಿದ್ದದನ್ನು ಎನ್‌ಸಿಬಿ ಬಯಲುಗೊಳಿಸಿದೆ. ಕೆಲ ದಿನಗಳ ಹಿಂದೆ ಯಷ್ಟೇ ಮೈಸೂರಿನಲ್ಲಿ ಡ್ರಗ್ಸ್ ದಂಧೆಯ ಜಾಲ, ತಯಾರಿಕಾ ಘಟಕವನ್ನು ಮಹಾರಾಷ್ಟ್ರ ಪೊಲೀಸ್ ಪತ್ತೆ ಮಾಡಿತ್ತು. ರಾಜ್ಯದ ಗೃಹ ಇಲಾಖೆಯ ಅಸಾಮರ್ಥ್ಯಕ್ಕೆ ಗೃಹ ಸಚಿವ ಪರಮೇಶ್ವರ್ ಅವರೇ ನೇರ ಹೊಣೆ ಎಂದು ಅವರು ಸಾಮಾ ಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಮಾತನಾಡಿ, ರಾಜ್ಯದಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಡ್ರಗ್ಸ್ ದಂಧೆಗೆ ಕಡಿ ವಾಣ ಹಾಕುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಡ್ರಗ್ಸ್ ದಂಧೆ ಪತ್ತೆ ಹಚ್ಚಲು, ಡ್ರಗ್ಸ್ ಪುಟ 2ಕ್ಕೆ




## ಡ್ರಗ್ಸ್ ನಂಟು: ಪೊಲೀಸರು ವಿಫಲ

### ಮೈಸೂರು ಪೊಲೀಸ್ ಆಯುಕ್ತರ ಹೇಳಿಕೆಗೆ ಸಂಸದ ಯದುವೀರ್ ಕಿಡಿ

**ಮೈಸೂರು:** ನಗರದಲ್ಲಿ ಡ್ರಗ್ಸ್ ತಯಾರಿಕೆ ಘಟ ಕವನ್ನು ಪತ್ತೆ ಹಚ್ಚುವಲ್ಲಿ ರಾಜ್ಯದ ಪೊಲೀಸರು ವಿಫಲರಾಗಿದ್ದಾರೆ ಎಂದು ಸಂಸದ ಯದುವೀರ ಕೃಷ್ಣದತ್ತ ಒಡೆಯರ್ ಟೀಕಿಸಿದರು.

ನಗರದ ತಮ್ಮ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದೆಹಲಿ ಪೊಲೀಸರು ಆಗಮಿಸಿ ಡ್ರಗ್ಸ್ ಜಾಲ ಪತ್ತೆ ಹಚ್ಚಿದ್ದಾರೆ. ಆದರೆ ಶೋಧ ವಿಚಾರದಲ್ಲಿ ಮೈಸೂರು ಪೊಲೀಸರು ವಿಫಲ ಆಗಿ ದ್ದಾರೆ. ಹೆಬ್ಬಾಳದಲ್ಲಿ ಎನ್‌ಸಿಬಿ ದಾಳಿ ಬಗ್ಗೆ ಗೃಹ ಸಚಿವ, ನಗರ ಪೊಲೀಸ್ ಆಯುಕ್ತರು ಇಬ್ಬರು ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ಏನು ಸಿಕ್ಕಿಲ್ಲ ಎಂದು ಹೇಳಿದ್ದಾರೆ. ನಾವು ಅವರ ಹೇಳಿಕೆಯನ್ನೇ ನಿಜವೆಂದು ಭಾವಿಸಿದ್ದೆವು. ಆದರೆ, ಎನ್‌ಸಿಬಿ ಮಾದಕ ದ್ರವ್ಯಗಳು ಪತ್ತೆಯಾಗಿ ರುವ ಬಗ್ಗೆ ಹೊರಡಿಸಿರುವ ಪ್ರಕಟಣೆಯಲ್ಲಿ ಮೈಸೂರಿನ ನಂಟು ಇರುವುದು ಬಹಿರಂಗವಾಗಿದೆ ಎಂದು ವಾಗ್ದಾಳಿ ನಡೆಸಿದರು. ದೆಹಲಿ ಪೊಲೀಸರು, ಮಹಾರಾಷ್ಟ್ರ ಪೊಲೀಸರು ಬಂದು ಮೈಸೂರಿನಲ್ಲಿ ಡ್ರಗ್ಸ್ ಪತ್ತೆ ಮಾಡುತ್ತಿದ್ದಾರೆ.



ಇದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಅನ್ನೋದಕ್ಕೆ ಉದಾಹರಣೆ. ನಮ್ಮ ಪೊಲೀಸರು ಏನು ಮಾಡುತ್ತಿದ್ದಾರೆ ಅನ್ನೋ ಅನುಮಾನ ಮೂಡಿದೆ. ಡ್ರಗ್ಸ್ ವಿಚಾರದಲ್ಲಿ ಮೈಸೂರು ಹೆಸರು ಪದೇ ಪದೇ ಕೇಳಿ ಬರುತ್ತಿದೆ. ಮೈಸೂರು ಪೊಲೀಸರು ಹಾಗೂ ಗೃಹ ಸಚಿವರು ಹೇಳಿಕೆಗಳ ಮೇಲೆಯೇ ಸಾಕಷ್ಟು ಅನುಮಾನಗಳು ಮೂಡುತ್ತಿದೆ ಎಂದು ಆರೋಪಿಸಿದರು. ಪ್ರಮುಖವಾಗಿ ನರಸಿಂಹರಾಜ ಕ್ಷೇತ್ರದಲ್ಲಿ ನಮಗೆ ಮಾದಕ ದ್ರವ್ಯ ಬಳಕೆಯ ದೂರು ಹೆಚ್ಚಾಗಿ ಬರುತ್ತಿವೆ. ಅಜೀಜ್ ಸೇಠ್ ಉದ್ಯಾನವನ್ನು ಸೆಲ್ಯೂಷನ್ ಪಾರ್ಕ್ ಎಂಬ ಹೆಸರಿನಲ್ಲಿ ಕರೆಯುತ್ತಿರುವುದು ಆ ಭಾಗದಲ್ಲಿ ಪುಟ 2ಕ್ಕೆ

## ಮಾಘ ಶುದ್ಧ ಹುಣ್ಣಿಮೆ ಮಹೋತ್ಸವ

### ನಿಮಿಷಾಂಭ ದೇಗುಲದಲ್ಲಿ ಭಕ್ತರಿಗೆ ಮೂಲಸೌಲಭ್ಯ | ಸಕಲ ಸಿದ್ಧತೆ

**ಶ್ರೀರಂಗಪಟ್ಟಣ:** ಪಟ್ಟಣದ ನಿಮಿಷಾಂಭ ದೇಗುಲದಲ್ಲಿ ಮಾಘ ಹುಣ್ಣಿಮೆ ಹಿನ್ನೆಲೆಯಲ್ಲಿ ಭಾನುವಾರ ಫೆ.1ರಂದು ಮಾಘ ಶುದ್ಧ ಹುಣ್ಣಿಮೆ ಮಹೋತ್ಸವ ನಡೆಯಲಿದೆ. ರಾಜ್ಯದ ವಿವಿಧೆಡೆಗಳಿಂದ ಸುಮಾರು 1 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಕಾರ್ಯಕ್ರಮಗಳಿಗೆ ಸಕಲ ಸಿದ್ಧತೆ ಮಾಡಲಾಗಿದೆ.

ಇಲ್ಲಿನ ಕಾವೇರಿ ನದಿಯಲ್ಲಿ ಸ್ನಾನ ಮಾಡಿ ಶ್ರೀ ನಿಮಿಷಾಂಬ ದೇವಿಯ ದರ್ಶನ ಪಡೆದರೆ ಇಷ್ಟಾರ್ಥ ಸಿದ್ದಿಸುವ ನಂಬಿಕೆ ಇದೆ. ಬರುವ ಭಕ್ತರಿಗೆ ಸೂಕ್ತ ಮೂಲಭೂತ ಸೌಲಭ್ಯಗಳನ್ನ ಕಲ್ಪಿಸಲಾಗುತ್ತಿದೆ. ಇಂದು ಮಧ್ಯರಾತ್ರಿ 2 ಗಂಟೆಯಿಂದಲೇ ದೇವಿಯ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ವಿಶೇಷ ಪೂಜೆಗಳೊಂದಿಗೆ ಹೋಮ-ಹವನ ಹಮ್ಮಿಕೊಳ್ಳಲಾಗಿದೆ.

ಈ ವರ್ಷವೂ ಫೆ.1ರ ಮಧ್ಯ ರಾತ್ರಿ 1 ಗಂಟೆಯಿಂದಲೇ ಇಲ್ಲಿನ ಕಾವೇರಿ ನದಿಯಲ್ಲಿ ಭಕ್ತರಿಗೆ ಮಾಘಶುದ್ಧ ಸ್ನಾನಕ್ಕೆ ವ್ಯವಸ್ಥೆ ಮಾಡಲಾಗಿದೆ. ಫೆ.2ರ ರಾತ್ರಿ 10 ಗಂಟೆಯವರೆವಿಗೂ ಮಾಘ ಶುದ್ಧ ಸ್ನಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಕ್ತರು



ಸ್ನಾನ ಮಾಡಲು ಹಾಗೂ ಬಟ್ಟೆ ಬದಲಿಸಿಕೊಳ್ಳಲು ನದಿ ತೀರದಲ್ಲಿ ಬ್ಯಾರಿಕೇಡ್‌ಗಳ ನಿರ್ಮಿಸಲಾಗಿದೆ. ನದಿ ಪಾತ್ರದಲ್ಲಿ ಮುಂಜಾಗ್ರತ ಕ್ರಮವಾಗಿ ಅಗ್ನಿ ಶಾಮಕ ದಳ ನಿಯೋಜನೆ, ವಿದ್ಯುತ್ ದೀಪಗಳ ವ್ಯವಸ್ಥೆ ಹಾಗೂ ವಾಹನಗಳ ನಿಲುಗಡೆಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ, ಕಾನೂನು ಬಾಹಿರ ಚಟುವಟಿಕೆಗೆ ಅವಕಾಶ ನೀಡದಂತೆ ಸೂಕ್ತ ಸ್ಥಳಗಳಲ್ಲಿ ಸಿಸಿ ಕ್ಯಾಮೆರಗಳನ್ನ ಅಳವಡಿಸಿಲಾಗಿದೆ.

ನೂಕು ನುಗ್ಗಲು ತಡೆಯಲು ಬ್ಯಾರಿಕೇಡ್ ವ್ಯವಸ್ಥೆ ಹಾಕಲಾಗಿದೆ. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಭಕ್ತರಿಗೆ ಪುಟ 2ಕ್ಕೆ



## ಸಮಾಜದ ಕಲ್ಯಾಣಕ್ಕೂ ಜ್ಞಾನ ಬಳಸಿ

### ಬದುಕು ಬದಲಿಸುವ ಡಿಜಿಟಲ್ ಕ್ರಾಂತಿ | ರಾಜ್ಯಪಾಲ ಗೆಹ್ಲೋಟ್ ಹೇಳಿಕೆ

**ಮೈಸೂರು:** ಶಿಕ್ಷಣ ಮತ್ತು ಜ್ಞಾನವನ್ನು ವೈಯಕ್ತಿಕ ಸಾಧನೆಗಾಗಿ ಮಾತ್ರವಲ್ಲದೆ ರಾಷ್ಟ್ರ ಮತ್ತು ಸಮಾಜದ ಕಲ್ಯಾಣಕ್ಕಾಗಿಯೂ ಬಳಸಬೇಕೆಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದರು.

ನಗರದಲ್ಲಿ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 21ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೂರ ಶಿಕ್ಷಣ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ, ಯಾಂತ್ರೀಕೃತ ಗೊಳಿಸುವಿಕೆ, ಡಿಜಿಟಲ್ ಕ್ರಾಂತಿ ಮತ್ತು ಹಸಿರು ತಂತ್ರಜ್ಞಾನ ಎಲ್ಲವೂ ನಮ್ಮ ಜೀವನ ಮತ್ತು ಉದ್ಯೋಗವನ್ನು ಪರಿವರ್ತಿಸುತ್ತಿವೆ. ಈ ಪರಿಸರ ದಲ್ಲಿ ನಿರಂತರ ಕಲಿಕೆಯ ಮನೋಭಾವವನ್ನು ಅಳವಡಿಸಿಕೊಳ್ಳಬೇಕು ಎಂದು ಕರೆನೀಡಿದರು.

ಇಂದಿನ ಭಾರತವು ಸ್ವಾವಲಂಬಿ ಮತ್ತು ಅಭಿವೃದ್ಧಿಯತ್ತ ಸಾಗುತ್ತಿದೆ. ಇದಕ್ಕೆ ಉದ್ಯಮಶೀಲತೆ ಮತ್ತು ಕೌಶಲ್ಯ ಅಭಿವೃದ್ಧಿ ಅತ್ಯಗತ್ಯ. ಗ್ರಾಮೀಣ ಉದ್ಯಮಶೀಲತೆ ಮತ್ತು ಸಾಮಾಜಿಕ ಉದ್ಯಮ ಎಲ್ಲವೂ ನಿಮಗೆ ಅಪಾರ ಅವಕಾಶಗಳನ್ನು ನೀಡುತ್ತವೆ. ವಸುಧೈವ ಕುಟುಂಬಕಂ ಎಂಬ ಸಂದೇಶವನ್ನು ಸಾಕಾರಗೊಳಿಸುವ ಮೂಲಕ ನಮ್ಮ ಸಾಂಸ್ಕೃತಿಕ ಬೇರುಗಳೊಂದಿಗೆ ಸಂಪರ್ಕದಲ್ಲಿರುವುದು ನಮಗೆ ಅತ್ಯಗತ್ಯ ಎಂದು ಅಭಿಪ್ರಾಯಪಟ್ಟರು. ಭವಿಷ್ಯದಲ್ಲಿ ವಿಶ್ವವಿದ್ಯಾಲಯವು ಕೌಶಲ್ಯ ಆಧಾರಿತ ಕೋರ್ಸ್, ಉದ್ಯೋಗ-ಆಧಾರಿತ ತರಬೇತಿ ಮತ್ತು ಸಂಶೋಧನೆಯನ್ನು ಮತ್ತಷ್ಟು ಬಲಪಡಿಸಬೇಕಿದೆ. ಇಲ್ಲಿನ ವಿದ್ಯಾರ್ಥಿಗಳು ವೈವಿಧ್ಯಮಯ ಹಿನ್ನೆಲೆಯಿಂದ ಬಂದವರು. ಕೆಲವರು ಕೆಲಸ ಮಾಡುತ್ತಲೇ ಅಧ್ಯಯನ ಮಾಡಿ ದ್ದಾರೆ. ಕೆಲವರು ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುತ್ತಲೇ ಅಧ್ಯಯನ ಮಾಡಿದ್ದಾರೆ. ಇದು ನಿಮ್ಮ ಇಚ್ಛಾಶಕ್ತಿಗೆ ಸಾಕ್ಷಿಯಾಗಿದೆ. ನಿಮ್ಮ ಜೀವನದುದ್ದಕ್ಕೂ ಈ ಇಚ್ಛಾಶಕ್ತಿಯನ್ನು ನೀವು ಕಾಪಾಡಿಕೊಳ್ಳಿ. ಕಲಿಯುತ್ತಲೇ ಇರಿ ಎಂದು ಹೇಳಿದರು. ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಯ ಮೂಲಕ ಉನ್ನತ ಶಿಕ್ಷಣವನ್ನು ಒದಗಿಸುವಲ್ಲಿ ಈ ವಿಶ್ವವಿದ್ಯಾನಿಲಯವು ದೇಶದ ಪ್ರಮುಖ ಮತ್ತು ಪ್ರಮುಖ ಸಂಸ್ಥೆಯಾಗಿದೆ. ಪುಟ 2ಕ್ಕೆ

▸▸ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 21ನೇ ಘಟಿಕೋತ್ಸವ

## ಸ್ಫೋಟ ಪ್ರಕರಣ: ಸಮಗ್ರ ತನಿಖೆಗೆ ಸಚಿವ ಈಶ್ವರ್ ಖಂಡ್ರೆ ಸೂಚನೆ



**ಬೀದರ್:** ಹುಮ್ನಾಬಾದ್ ತಾಲೂಕಿನ ಮೊಳಕೇರಾ ಗ್ರಾಮದಲ್ಲಿ ಅನುಮಾನಾಸ್ಪದ ವಸ್ತು ಸ್ಫೋಟಗೊಂಡು ಮಕ್ಕಳೂ ಸೇರಿ 6 ಜನರಿಗೆ ಗಂಭೀರ ಗಾಯಗೊಂಡ ಘಟನೆ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಆದೇಶಿಸಿದ್ದಾರೆ. ಗಾಯಾಳುಗಳ ಚಿಕಿತ್ಸಾ ವೆಚ್ಚ ಭರಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಅಲ್ಲದೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಸ್ಫೋಟಕ ಪರೀಕ್ಷಾ ತಜ್ಞರನ್ನು ಸ್ಥಳಕ್ಕೆ ಕಳುಹಿಸಿ ಮಾದರಿ ಸಂಗ್ರಹಿಸಿ ತನಿಖೆ ನಡೆಸಬೇಕು. ಸ್ಫೋಟಕ್ಕೆ ಕಾರಣವೇನು? ಸ್ಫೋಟಕ್ಕೆ ಬಳಕೆಯಾಗಿರುವ ವಸ್ತು ಯಾವುದು? ಆ ಸ್ಫೋಟಕ ವಸ್ತು ಅಲ್ಲಿಗೆ ಹೇಗೆ ಬಂತು? ಯಾವ ಪುಟ 2ಕ್ಕೆ

## ಗ್ರಾಮಾಂತರ ಪೊಲೀಸರ ದಾಳಿ


**ಮೈಸೂರು:** ಮಾದಕ ವಸ್ತು ತಯಾರಿಕೆ ಶಂಕೆಯಿಂದ ಮನೆಯೊಂದರ ಮೇಲೆ ಮೈಸೂರು ದಕ್ಷಿಣ ಪೊಲೀಸ್ ಠಾಣೆ ಪೊಲೀಸರು ದಾಳಿ ನಡೆಸಿದ್ದಾರೆ. ಡ್ರಗ್ಸ್ ತಯಾರಿಕೆಗೆ ಬಳಸುವ ರಾಸಾಯನಿಕ ವಸ್ತುಗಳು ಪತ್ತೆಯಾಗಿವೆ.

ಮೈಸೂರು ತಾಲ್ಲೂಕಿನ ಯಾಂದಳ್ಳಿ ಗ್ರಾಮದ ಸಪ್ತಮಾತೃಕ ಬಡಾವಣೆಯಲ್ಲಿ ಕಟ್ಟಡವನ್ನು ಬಾಡಿಗೆಗೆ ಪಡೆದು ಡ್ರಗ್ಸ್ ತಯಾರಿಸುತ್ತಿದ್ದರು ಎನ್ನಲಾಗಿದೆ. ಈಗ ಎನ್‌ಸಿಬಿ ತಂಡದ ವಶದಲ್ಲಿರುವ ಗಣಪತ್ ಲಾಲ್ ಸಹಿತ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ಗಿರೀಶ್ ಬಾಬು ಎಂಬುವರಿಗೆ ಸೇರಿದ ಕಟ್ಟಡವನ್ನು ಗಣಪತ್ ಬಾಡಿಗೆಗೆ ಪಡೆದಿದ್ದರು. ಕಟ್ಟಡದಲ್ಲಿ ಮಾದಕ ವಸ್ತು ಚಟುವಟಿಕೆ ನಡೆಯುತ್ತಿದೆ ಎಂಬ ಮಾಹಿತಿ ಪಡೆದ ಇನ್ಸ್ಪೆಕ್ಟರ್ ಎಂ.ಎಲ್.ಶೇಖರ್ ನೇತೃತ್ವದ ಪೊಲೀಸರ ತಂಡ ಶುಕ್ರವಾರ ರಾತ್ರಿ ದಾಳಿ ನಡೆಸಿದೆ. ಪುಟ 2ಕ್ಕೆ

## ಉದ್ಯಮಿಗಳಿಗೆ ಕೇಂದ್ರದಿಂದ ಕಿರುಕುಳ

### ಮಾತು ಕೇಳದವರ ವಿರುದ್ಧ ಇಡಿ, ಐಟಿ ಬಳಕೆ | ಪ್ರಿಯಾಂಕ್ ವಾಗ್ದಾಳಿ



**ಬೆಂಗಳೂರು:** ಕೇಂದ್ರ ಸರ್ಕಾರದ ಮಾತು ಕೇಳದ ಉದ್ಯ ಮಿಗಳಿಗೆ ಇಡಿ, ಐಟಿ ಬಳಸಿಕೊಂಡು ಕಿರುಕುಳ ಕೊಡುವ ಕೆಲಸವನ್ನು ಕೇಂದ್ರ ಸರ್ಕಾರ ಕಳೆದ 10 ವರ್ಷಗಳಿಂದ ಮಾಡುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಉದ್ಯಮಿ ಸಿಜೆ ರಾಯ್ ಆತ್ಮಹತ್ಯೆ ಬಗ್ಗೆ ಮಾಧ್ಯಮಗಳಿಗೆ ಶನಿವಾರ ಪ್ರತಿ ಕ್ರಿಯೆ ನೀಡಿದ ಅವರು, ಉದ್ಯಮಿಗಳ ಮೇಲೆ ಕೇಂದ್ರ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ. ಇಡೀ ರಾಷ್ಟ್ರದಲ್ಲಿ ಈ ಪ್ರವೃತ್ತಿ ಹೆಚ್ಚಾಗಿದೆ. ಕೇಂದ್ರಕ್ಕೆ ತಲೆಬಾ ಗದ ಉದ್ಯಮಿಗಳಿಗೆ ಕಿರುಕುಳ ಆಗುತ್ತಿದೆ. ಆದರೆ, ಅಂಬಾನಿ, ಅದಾನಿಗೆ ಇಡಿ, ಐಟಿ ಕಿರುಕುಳ ಏನು ಇಲ್ಲ. ಸರ್ಕಾರವೇ ಅವರಿ ಗಾಗಿ ಕೆಲಸ ಮಾಡು ತ್ತಿದೆ ಎಂದು ಕಿಡಿಕಾರಿದರು. ರಾಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅಂದರೆ ಕಿರುಕುಳ ಎಷ್ಟು ಆಗಿರಬಹುದು ಎಂಬುದು ತಿಳಿಯು ತ್ತಿದೆ. ಸಾಮಾನ್ಯ ಜನರಿಗೂ ಇಂತಹ ಕಿರುಕುಳ ಆಗು ತ್ತಿದೆ. ಬೇಕಾದರೆ ಸರ್ವೆ ಮಾಡಿ ಗೊತ್ತಾಗುತ್ತದೆ. ಜನರಿಗೆ ತೊಂದರಿಗೆ ಕೊಡಲು ಕೇಂದ್ರದ ಬಳಿ ಹೊಸ ಆಯು ಧವೇ ಇದೆ. ಕಿರುಕುಳದ ಬಗ್ಗೆ ಅವರ ಕುಟುಂಬ ಹೇಳು ತ್ತಿದೆ. ಇದರ ಬಗ್ಗೆ ತನಿಖೆ ಆಗಲಿ ಎಂದು ಹೇಳಿದರು. ಐಟಿ ಅಧಿಕಾರಿಗಳ ವಿರುದ್ಧವೂ ತನಿಖೆ ಆಗಬೇಕು. ಅವರು ಕ್ರೈಂ ಸೀನ್‌ನಲ್ಲಿ ಇದ್ದರು. ಅಲ್ಲಿ ಇದ್ದವರ ಎಲ್ಲರ ತನಿಖೆ ಆಗಲಿ ಎಂದು ಒತ್ತಾಯಿಸಿದರು. ಕೇಂದ್ರ ಬಜೆಟ್ ಬಗ್ಗೆ ನಾನು ಯಾವುದೇ ನಿರೀಕ್ಷೆ ಇಟ್ಟುಕೊಂಡಿಲ್ಲ. ಮೋದಿ ಸರ್ಕಾರ 12 ವರ್ಷಗಳಿಂದ ರಾಜ್ಯಕ್ಕೆ ಏನೂ ಮಾಡಿಲ್ಲ. ನಿರ್ಮಲಾ ಪುಟ 2ಕ್ಕೆ

ಮೊದಲ ಪುಟದಿಂದ

## ಮೈಸೂರಿನಲ್ಲಿ ಡ್ರಗ್ಸ್ ಪ್ಯಾಕ್ಟರಿ ಪತ್ತೆ

ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಫಿನಾಯಿಲ್ ಫ್ಯಾಕ್ಟರಿ ಸೋಗಿ ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡ್ರಗ್ಸ್ ಘಟಕ ಮೇಲೆ ದಾಳಿ ನಡೆಸಿದೆ. ಅತ್ಯಾಧುನಿಕ ಉಪಕರಣಗಳು ಮತ್ತು ಡ್ರಗ್ಸ್ ತಯಾರಿಕೆಗೆ ಬಳಸುವ ವಸ್ತುಗಳನ್ನು ವಶಕ್ಕೆ ಪಡೆದಿದೆ. ಈ ಪ್ರಕರಣದಲ್ಲಿ ಇದುವರೆಗೆ 10 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಮಾದಕ ವಸ್ತುಗಳು, 25.6 ಲಕ್ಷ ರೂ. ನಗದು, ಟೊಯೋಟಾ ಫಾರ್ಚೂನರ್ ಎಸ್‌ಯುವಿ ಮತ್ತು 500 ಕೆಜಿಗಿಂತ ಹೆಚ್ಚು ತೂಕದ ಡ್ರಗ್ಸ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎನ್‌ಸಿಬಿ ತಿಳಿಸಿದೆ. ಭಾರತದಲ್ಲಿ ಮಿಫೆಡ್ರೋನ್ ಬಳಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಿವಿಧ ರಾಜ್ಯಗಳಿಗೆ ಎಚ್ಚರಿಕೆ ನೀಡಿರುವ ಎನ್‌ಸಿಬಿ, ಮಿಫೆಡ್ರೋನ್ ತಯಾರಿಕೆಗೆ ಬಳಸುವ 2–ಬ್ರೋಮೋ 4–ಮೆಥೈಲ್ಪ್ರೊಪಿಯೋಫೆನೋನ್ ಮತ್ತು ಮೊನೋಮೆಥೈಲಮೈನ್ ಎಂಬ ಎರಡು ಪ್ರಮುಖ ರಾಸಾಯನಿಕಗಳ ಖರೀದಿದಾರರ ಹಿನ್ನೆಲೆ ಪರಿಶೀಲನೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

## ಜೈಲಿನಲ್ಲಿ ಡ್ರಗ್ಸ್ ತಯಾರಿ ತರಬೇತಿ

ಎನ್‌ಡಿಪಿಎಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದಾಗಲೇ ಸಿಂಥಟಿಕ್ ಡ್ರಗ್ಸ್ ತಯಾರಿಕೆಯ ಪ್ರಕ್ರಿಯೆ, ಮಾರುಕಟ್ಟೆ ಬೇಡಿಕೆ ಮತ್ತು ಸರಬರಾಜು ಜಾಲದ ಬಗ್ಗೆ ತಿಳಿದುಕೊಂಡಿದ್ದ. ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ 2024ರಲ್ಲಿ ಮೈಸೂರಿನಲ್ಲಿ ಗುಪ್ತವಾಗಿ ಉತ್ಪಾದನಾ ಘಟಕ ಸ್ಥಾಪಿಸಿ, ಅನೇಕ ಬಾರಿ ಡ್ರಗ್ಸ್ ಉತ್ಪಾದನೆ ಮಾಡಿ ಮಾರಾಟ ಮಾಡಿದ್ದಾನೆ. ಈ ವರೆಗೆ ಬಂಧಿತರಾದ ನಾಲ್ವರೂ ರಾಜಸ್ಥಾನದ ಜಾಲೋರ್ ಜಿಲ್ಲೆಯವರಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇತರ ಸದಸ್ಯರು, ಪ್ರಯೋಗಾಲಯ ಉಪಕರಣಗಳು ಮತ್ತು ರಾಸಾಯನಿಕಗಳ ಸರಬರಾಜು ಮೂಲ ಪತ್ತೆಹಚ್ಚಲು ತನಿಖೆ ಮುಂದುವರಿದಿದೆ.

## ಗೃಹ ಇಲಾಖೆಯ ವೈಫಲ್ಯ ಬಯಲು ವಿಜಯೇಂದ್ರ ಟೀಕೆ

ಕೋರ ರನ್ನು ಹಾಕಲು ಮಹಾರಾಷ್ಟ್ರ ಪೊಲೀಸರು ಬರಬೇಕಾದರೆ ಕರ್ನಾಟ ಕದ ಪೊಲೀಸ್ ಇಲಾಖೆ ಏನು ಮಾಡುತ್ತಿದೆ? ರಾಜ್ಯದ ಗುಪ್ತಚರ ಇಲಾಖೆ ಏನು ಮಾಡು ತ್ತಿದೆ? ಎಂದು ಪ್ರಶ್ನಿಸಿದ್ದಾರೆ.

## ಕೇಂದ್ರದಿಂದ ಕಿರುಕುಳ

ಸೀತಾರಾಮನ್ ಎರಡು ಬಾರಿ ರಾಜ್ಯದಿಂದ ಆಯ್ಕೆ ಆಗಿದ್ದರು. ರಾಜ್ಯಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆ? ಕನ್ನಡಿಗರ ಋಣ ತೀರಿ ಸಿಲ್ಲ. ಕೇಂದ್ರ ನಮಗೆ ಕೊಡಬೇಕಾದ ನಮ್ಮ ಪಾಲು ಕೊಟ್ಟರೆ ಸಾಕಾಗಿದೆ. ಜಿಎಸ್‌ಟಿ ಪಾಲು, ಜೆಜೆಎಂ ಪಾಲು, ಬಂದರೆ ಸಾಕಾಗಿದೆ. ಮೋದಿ ಸರ್ಕಾರದಿಂದ ರಾಜ್ಯಕ್ಕೆ ಬಜೆಟ್ ಕೊಡುಗೆ ನಮ್ಮದು ಶೂನ್ಯ ನಿರೀಕ್ಷೆ. ನಮ್ಮ ಪಾಲು ನಮಗೆ ಕೊಡಿ. ನಾವು ದೇಶ ಕಟ್ಟುತ್ತೇವೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು.

## ಮಾಘ ಶುದ್ಧ ಹುಣ್ಣಿಮೆ ಮಹೋತ್ಸವ

ಪ್ರಸಾದ, ಕುಡಿಯುವ ನೀರು, ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಭಕ್ತರಿಗೆ ವಿತರಿಸಲು 1 ಲಕ್ಷ ಲಡ್ಡು ತಯಾರಿಸಲಾಗಿದೆ. ಬೆಂಗಳೂರಿನ ದಾನಿಯೊಬ್ಬರು ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ ಹಾಗೂ ಸಂಜೆ ತಿಂಡಿ ವ್ಯವಸ್ಥೆಯನ್ನೂ ಕೈಗೊಂಡಿದ್ದಾರೆ. ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ದೇವಾಲಯದ ವರೆಗೆ ಸರ್ಕಾರಿ ಬಸ್ ಸೌಲಭ್ಯ ಮಾಡಲಾಗಿದೆ.

## ಪೊಲೀಸ್ ಕಮಿಷನರ್ ಅನುಮಾನಾಸ್ಪದ ಹೇಳಿಕೆ

ಇದು ಅಹಮದಾಬಾದ್ ಪ್ರಕರಣಕ್ಕೆ ಸಂಬಂಧಿಸಿದ ತಪಾಸಣೆಯಾಗಿದೆ. ಯಾರನ್ನೂ ಬಂಧಿಸಿಲ್ಲ ಎಂದು ತದ್ವಿರುದ್ಧ ಹೇಳಿಕೆ ನೀಡಿದ್ದಾರೆ.

## ಸಮಾಜದ ಕಲ್ಯಾಣಕ್ಕೂ ಜ್ಞಾನ ಬಳಸಿ

ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಮಾನವ ಸಂಪನ್ಮೂಲಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಶ್ಲಾಘಿಸಿದರು. ಕುಲಪತಿ ಶರಣಪ್ಪ ವಿ ಹಲ್ಸೆ ಉಪಸ್ಥಿತರಿದ್ದರು.

# ಅಕ್ರಮ ರೆಸಾರ್ಟ್‌ಗಳ ನಿರ್ಮಾಣ ಆರೋಪ: ದಾಖಲೆಗಳ ಪರಿಶೀಲನೆ

ಎಚ್.ಡಿ.ಕೋಟೆ: ಇತ್ತೀಚೆಗೆ ತಾಲೂಕಿನಲ್ಲಿ ನಡೆದ ಹುಲಿ ದಾಳಿಗೆ ರೆಸಾರ್ಟ್ ಗಳ ಅಕ್ರಮ ನಿರ್ಮಾಣವೇ ಕಾರಣ. ಇಲ್ಲಿ ನಡೆಯುವ ಮೋಜು, ಮಸ್ತಿ, ಶಬ್ಧ ಮಾಲಿನ್ಯದಿಂದ ಕಾಡುಪ್ರಾಣಿಗಳು ನಾಡಿಗೆ ಬಂದು ಮಾನವ–ಪ್ರಾಣಿ ಸಂಘರ್ಷ ಏರ್ಪಟ್ಟಿದೆ. ಕೂಡಲೇ ಅಕ್ರಮ ರೆಸಾರ್ಟ್ ಗಳ ತೆರವು ಮಾಡಿ ಎಂದು ಮೈಸೂರಿನ ವಕೀಲ ರವಿಕುಮಾರ್, ಕೆಲ ರೈತ ಸಂಘಟನೆ, ಪರಿಸರವಾದಿಗಳು ಪ್ರತಿಭಟನೆ ನಡಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರ ಪರಿಣಾಮ ಶುಕ್ರವಾರ ಮಧ್ಯಾಹ್ನದಿಂದ ಅಧಿಕಾರಿಗಳು ರೆಸಾರ್ಟ್ಗಳ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದಾರೆ.

ಕಬಿನಿ ಉಳಿಸಿ ಹೋರಾಟ ಸಮಿತಿ ವತಿಯಿಂದ ಮೈಸೂರಿನಲ್ಲಿ ಪ್ರಾರಂಭಗೊಂಡ ಕಿಚ್ಚು ಕಳೆದ ವಾರ ತಾಲೂಕು ಆಡಳಿತ ಸೌಧ ತಲುಪಿತ್ತು. ತಾಲೂಕು ಕಚೇರಿ ಮುಂಭಾಗ ಸಾಮೂಹಿಕ ನಾಯಕತ್ವ ರಾಜ್ಯ ರೈತ ಸಂಘದ ಮುಖಂಡರಾದ ಹೊನ್ನೂರು ಪ್ರಕಾಶ್, ಮಂಜು ಕಿರಣ್, ಬಡಗಲಪುರ ನಾಗೇಂದ್ರ ನೇತೃತ್ವದ ರಾಜ್ಯ ರೈತ ಸಂಘ, ಪರಿಸವಾದಿ ಭಾನುಮೋಹನ್, ವಕೀಲ ರವಿಕುಮಾರ್, ಕನ್ನಡ ಹೃದಯವಂತ





ಬಳಗದ ಪರಮೇಶ್, ರೈತ ಮಾದಾಪುರ ಕುಮಾರಸ್ವಾಮಿ, ಕಬಿನಿ ಶಿವಲಿಂಗ ಸೇರಿದಂತೆ ಅನೇಕರು ಅನಿರ್ಧಿಷ್ಟಾವಧಿ ದರಣಿ ಕೈಗೊಂಡಿದ್ದರು. ಮನವಿ ಸ್ವೀಕರಿಸಲು ಸ್ಥಳಕ್ಕಾಗಮಿಸಿದ ತಹಸಿಲ್ದಾರ್ ಶ್ರೀನಿವಾಸ್ ಸೇರಿದಂತೆ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದ್ದರು. ಪ್ರತಿಭಟನಾಕಾರರು ಅಧಿಕಾರಿಗಳನ್ನು ತರಾಟೆಗೆ ತಗೆದುಕೊಳ್ಳುತ್ತಿದ್ದಂತೆ ಅಧಿಕಾರಿ ವರ್ಗ ಇಪ್ಪತ್ತು ದಿನಗಳ ಕಾಲಾವಕಾಶ ನೀಡುವಂತೆ ಕೋರಿದ್ದರು. ಅಕ್ರಮ ರೆಸಾರ್ಟ್ ಗಳ ಕುರಿತು ಕ್ರಮ ಕೈಗೊಳ್ಳದಿದ್ದರೆ ಫೆ.20ರ ನಂತರ ಪ್ರತಿಭಟನೆ ತೀವ್ರಗೊಳಿಸುವುದಾಗಿ ಎಚ್ಚರಿಸಿದ್ದರು.

ಮೊದಲಿಗೆ ಈ ಬಗ್ಗೆ ಯಾವುದೇ ಲಿಖಿತ ದೂರು ಬಂದಿಲ್ಲ ಎಂದು ಹೇಳಿದ್ದ ಶಾಸಕ ಅನಿಲ್ ಚಿಕ್ಕಮಾದು ಕ್ರಮೇಣ ಕೆಲ ಅಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಿದ್ದರು.ಇದೀಗ ಜಿಲ್ಲಾಧಿಕಾರಿ ಲಕ್ಷ್ಮೀ ಕಾಂತ್ ರೆಡ್ಡಿ, ಶಾಸಕ ಅನಿಲ್ ಚಿಕ್ಕಮಾದು ಕುರಿತು ತನಿಖೆಗೆ ಆದೇಶಿಸಿದ ನಂತರ ಇದೀಗ, ಶುಕ್ರವಾರ ಮಧ್ಯಾಹ್ನ ಹುಣಸೂರು ಉಪ ವಿಭಾಗಾಧಿಕಾರಿ ಕಾವ್ಯಾರಾಣಿ ತಾಲೂಕು ಕಚೇರಿಗೆ ಆಗಮಿಸಿ ತನಿಖೆಯ ರೂಪುರೇಷೆ ಸಿದ್ಧಪಡಿಸಿ, ಕೆಲ ಸಮಯ ಅಧಿಕಾರಿಗಳೊಟ್ಟಿಗೆ ಚರ್ಚಿಸಿ. ಕಬಿನಿ ಹಿನ್ನೀರಿನ ಏಳು ಹೋಂಸ್ಟೇ, ಹದಿಮೂರು ರೆಸಾರ್ಟ್ ಗಳಿಗೆ ಭೇಟಿ ನೀಡಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಪಟ್ಟಿದೆಯೇ, ನೀರಾವರಿ, ಸ್ಥಳೀಯ ಗ್ರಾ.ಪಂ, ಅಗ್ನಿ ಶಾಮಕ ಹಾಗೂ ಇತರೆ ಇಲಾಖೆಯಿಂದ ಅನುಮತಿ ಪಡೆದಿದ್ದಾರೆಯೇ ಎಂಬ ಇತ್ಯಾದಿ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ. ಇತರೆ ಕಾರ್ಯದ ನಿಮಿತ್ತ ಉಪ ವಿಭಾಗಾಧಿಕಾರಿ ಶನಿವಾರ ಗೈರು ಹಾಜರಾಗಿದ್ದಾರೆ. ತಹಸೀಲ್ದಾರ್ ಶ್ರೀನಿವಾಸ್ ನೇತೃತ್ವದಲ್ಲಿ ಪರಿಶೀಲನೆ ಕಾರ್ಯಪ್ರಗತಿ ಯಲ್ಲಿದ್ದು, ಈ ಕುರಿತು ಹೆಚ್ಚಿನ ಮಾಹಿತಿಗೆ ಪತ್ರಿಕೆ ಕರೆ ಮಾಡಿದಾಗ ತಹಸೀಲ್ದಾರ್ ಕರೆ ಸ್ವೀಕರಿಸಲಿಲ್ಲ. ತಾಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕ ಬಸವರಾಜು, ಭೂಮಾಪಕರಾದ ಶಂಭುಲಿಂಗ, ಅರ್ಜುನ್, ಅರಣ್ಯಾಧಿಕಾರಿಗಳಾದ ಸಿದ್ದರಾಜು, ಮಧು, ನೀರಾವರಿ ಇಲಾಖೆ ಅಭಿಯಂತರ ಗಣೇಶ್, ಅಗ್ನಿಶಾಮಕದಳ, ಪರಿಸರ ಮಾಲಿನ್ಯಾಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಇದ್ದರು.

# ಮಡಿವಾಳ ಸಮುದಾಯಕ್ಕೆ 500 ಕೋಟಿ ರೂ. ಮೀಸಲಿಗೆ ಮನವಿ




ಮೈಸೂರು: ಮಡಿವಾಳ ಸಮುದಾಯದ ಶಿಕ್ಷಣ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ 500 ಕೋಟಿ ಮೀಸಲಿರಿಸಬೇಕೆಮದು ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘದ ಗೌರವಾಧ್ಯಕ್ಷ ಬಿ.ಜಿ. ಕೇಶವ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಸಮುದಾಯ ಎಲ್ಲ ರೀತಿಯಲ್ಲೂ ಹಿಂದುಳಿದಿದೆ. ಆದರೂ ಆಡಳಿತ ನಡೆಸುವ ಯಾವುದೇ ಸರ್ಕಾರ ಈ ಸಮಾಜವನ್ನು ಮುಖ್ಯ ವಾಹಿನಿಗೆ ತರಲು ಗಂಭಿರ ಯತ್ನ ನಡೆಸಲಿಲ್ಲ. ಸಮುದಾಯ ಸಂಘಟಿತವಾಗದಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ ಎಂದು ವಿಷಾದಿಸಿದರು.

ಹೀಗಾಗಿ ಈ ಬಾರಿಯಾದರೂ ಸಿಎಂ ಸಿದ್ದರಾಮಯ್ಯ ಅವರ ಸರ್ಕಾರ ಈ ಸಮುದಾಯದ ಅಭಿವೃದ್ಧಿಗಾಗಿ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ರೂ. ಮೀಸಲಿರಿಸಬೇಕು, ಪ್ರತಿ ಜಿಲ್ಲೆಯಲ್ಲಿ 5 ಕೋಟಿ ವೆಚ್ಚದಲ್ಲಿ, ತಾಲೂಕಿನಲ್ಲಿ 3 ಕೋಟಿ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಿಕೊಡಬೇಕು ಎಂದು ಕೋರಿದರು. ಜಿಲ್ಲಾಧ್ಯಕ್ಷ ಸತ್ಯನಾರಾಯಣ, ಇನ್ನಿತರ ಪದಾಧಿಕಾರಿಗಳಾದ ಕುಮಾರ್ ಸಿದ್ದನಕೊಪ್ಪಲು, ಹರ್ಷವರ್ಧನ್, ರವಿ ಚಿಲ್ಕುಂದ, ರವಿ, ಕೆಂಪಶೆಟ್ಟಿ, ಡಾ. ಚಂದ್ರು, ಕೆ. ರಘು, ಶ್ರೀರಾಮ, ಕೆ. ಮಹದೇವಶೆಟ್ಟಿ ಮೊದಲಾದವರು ಇದ್ದರು.

# ಮಾಚಿದೇವರ ಜಯಂತಿ ಯಶಸ್ಸಿಗೊಳಿಸಿ

ಮೈಸೂರು: ಫೆ.1ರಂದು ನಡೆಯುವ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮಡಿವಾಳ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಗಬೇಕೆಂದು ರಾಜ್ಯ ಮಡಿವಾಳ ಮಾಚಿದೇವರ ಸಂಘದ ರಾಜ್ಯಾಧ್ಯಕ್ಷ ಮಂಜು ಬಿ. ಶೆಟ್ಟಿ ಮನವಿ ಮಾಡಿದರು.

ನಗದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸರ್ಕಾರಿ ಕಚೇರಿಗಳಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಜಯಂತಿ ಕಾರ್ಯಕ್ರಮ ನಡೆಯಲಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಸಂಘಟಿತರಾಗುವ ಯತ್ನಕ್ಕೆ ಮುಂದಾಗಬೇಕೆಂದು ಕೋರಿದರು. ಇದೇ ವೇಳೆ ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಮಡಿವಾಳ ನಿಗಮಕ್ಕೆ 100 ಕೋಟಿ ರೂ. ಬಿಡುಗಡೆ ಮಾಡಬೇಕು,




ಸಮುದಾಯ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ದುರ್ಬಲವಾಗಿದೆ. ಹೀಗಾಗಿ ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಕೋರಿ ಉಪವಾಸ ಸತ್ಯಾಗ್ರಹ ನಡೆಸಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಹೋರಾಟ ಮುಂದುವರಿಯಲಿದೆ. ಜೊತೆಗೆ ಸರ್ಕಾರ ಸಹಾ ಗಮನ ಹರಿಸಬೇಕೆಂದು ಮನವಿ ಮಾಡಿದರು. ಇನ್ನಿತರ ಪದಾಧಿಕಾರಿಗಳಾದ ಎಚ್.ಪಿ. ಬಸವರಾಜು ಹಾಡ್ಯ, ರಂಗಸ್ವಾಮಿ, ನಾಗರಾಜು, ತಮ್ಮಣ್ಣ ಇದ್ದರು.

# ಹೆಣ್ಣುಮಕ್ಕಳ ರಕ್ಷಣೆ, ಜವಾಬ್ದಾರಿ ನಮ್ಮೆಲ್ಲರ ಆದ್ಯ ಕರ್ತವ್ಯ

## ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್




ಚಾಮರಾಜನಗರ, ಪ್ರತಿಯೊಂದು ಹೆಣ್ಣುಮಗುವಿನ ರಕ್ಷಣೆ, ಜವಾಬ್ದಾರಿ ಪ್ರಜ್ಞಾವಂತ ನಾಗರಿಕ ಸಮಾಜದಲ್ಲಿರುವ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ ಅವರು ತಿಳಿಸಿದರು. ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಬೇಟಿ ಬಚಾವೋ–ಬೇಟಿ ಪಡಾವೋ ಅಭಿಯಾನದಡಿ ಆಯೋಜಿಸಲಾಗಿದ್ದ 'ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ಕಾಲದ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳು, ಮಹಿಳೆಯರು ಅಡುಗೆಮನೆಗೆ ಮಾತ್ರ ಸೀಮಿತವಾಗಿದ್ದರು. ಸಾಕಷ್ಟು ದೌರ್ಜನ್ಯಗಳನ್ನು ಅನುಭವಿಸುತ್ತಿದ್ದರು. ಲಿಂಗ ತಾರತಮ್ಯ, ಲೈಂಗಿಕ ದೌರ್ಜನ್ಯ, ಹೆಣ್ಣುಮಕ್ಕಳು ಕುಟುಂಬಕ್ಕೆ ಭಾರ, ಸಾಮಾಜಿಕ ತಾತ್ಸಾರಕ್ಕೆ ಒಳಗಾಗಿದ್ದ ಹೆಣ್ಣುಮಕ್ಕಳು ಬದಲಾದ ಕಾಲಘಟ್ಟದಲ್ಲಿ ಸಂವಿಧಾನ ಜಾರಿಯಾದ ಬಳಿಕ ಸಾಮಾಜಿಕ, ಶೈಕ್ಷಣ ಕ, ರಾಜಕೀಯ, ಕ್ಷೇತ್ರಗಳು ಸೇರಿದಂತೆ ಎಲ್ಲಾ ರಂಗದಲ್ಲಿಯೂ ಮುಂಚೂಣಿಯಲ್ಲಿದ್ದಾರೆ. ಸಂವಿಧಾನದಡಿ ಹೆಣ್ಣುಮಕ್ಕಳ ರಕ್ಷಣೆಗೆ ಹಲವಾರು ಕಾನೂನುಗಳು ಜಾರಿಯಾಗಿದ್ದು, ಉನ್ನತ ವಿದ್ಯಾಭ್ಯಾಸ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಹೆಣ್ಣುಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಹೊಂದಬೇಕು. ಮಕ್ಕಳ ರಕ್ಷಣೆಗೆ 54 ಹಕ್ಕುಗಳಿದ್ದು, ಅವುಗಳಲ್ಲಿ ಬದುಕುವ ಹಕ್ಕು, ಅಭಿವೃದ್ಧಿ ಹೊಂದುವ, ಭಾಗವಹಿಸುವ ಹಕ್ಕು, ದೌರ್ಜನ್ಯದಿಂದ ರಕ್ಷಣೆ ಹಕ್ಕು, ಮಾನವ ಕಳ್ಳಸಾಗಣೆ ತಡೆಯುವ ಹಕ್ಕುಗಳು ಪ್ರಮುಖವಾಗಿವೆ. ಹೆಣ್ಣುಮಕ್ಕಳು ಬಾಲ್ಯವಿವಾಹ ಆಗಬಾರದು. ಮಕ್ಕಳಿಗೆ 18 ವರ್ಷ ತುಂಬಿದ ತಕ್ಷಣವೇ ಪೋಷಕರು ಮದುವೆ ಮಾಡಲು ನಿರ್ಧರಿಸುತ್ತಾರೆ, ಇದು ಸಲ್ಲದು. 18 ವರ್ಷದ ನಂತರವೂ ಉನ್ನತ ಶಿಕ್ಷಣ ಪಡೆದು ಅಭಿವೃದ್ಧಿ ಹೊಂದಲು ಅವಕಾಶ ಮಾಡಿಕೊಡಬೇಕು ಎಂದು ನ್ಯಾಯಾಧೀಶರಾದ ಈಶ್ವರ ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ 2018ರಲ್ಲಿ ಬೇಟಿ ಬಚಾವೋ–ಬೇಟಿ ಪಡಾವೋ ಕಾರ್ಯಕ್ರಮ ಜಾರಿಯಾಗಿದೆ. ದೇಶ ಸ್ವಾತಂತ್ರ್ಯನಂತರ ಹೆಣ್ಣುಮಕ್ಕಳ ಸಬಲೀಕರಣಕ್ಕೆ ಸರ್ಕಾರವು ಸಾಕಷ್ಟು ಕಾಯ್ದೆಗಳು ಜಾರಿಯಾಗಿದೆ. ಹೆಣ್ಣುಮಕ್ಕಳಿಗೆ ಕಾನೂನಿನ ರಕ್ಷಣೆ ಇದ್ದರೂ ಇನ್ನೂ ರಕ್ಷಣೆ ಮಾಡಬೇಕೆನ್ನುವುದು ವಿಪರ್ಯಾಸವೇ ಆಗಿದೆ. ಯಾವುದು ಸರಿ, ಯಾವುದು ತಪ್ಪು ಎಂಬುದರ ಬಗ್ಗೆ ಹೆಣ್ಣುಮಕ್ಕಳು ಚಿಂತನೆ ಮಾಡಬೇಕು. ಹೆಣ್ಣುಮಕ್ಕಳ ಆಲೋಚನೆ, ಚಿಂತನೆ, ನಿರ್ಧಾರಗಳೇ ಅವರನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಲಿವೆ ಎಂದರು.

ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಹೆಣ್ಣು ಮತ್ತು ಗಂಡುಮಕ್ಕಳಲ್ಲಿನ ವ್ಯತ್ಯಾಸವೆಂದರೇ ಅದು ಜೈವಿಕ ಬದಲಾವಣೆ ಮಾತ್ರವಾಗಿದೆ. ಪುರುಷ, ಮಹಿಳೆಯರಿಬ್ಬರೂ ಸಮಾನರೇ ಆಗಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಹೆಣ್ಣುಮಕ್ಕಳು ಮುಂದಿದ್ದಾರೆ. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವರೆಗೂ ಹೆಣ್ಣುಮಕ್ಕಳು ಉನ್ನತ ರ್ಯಾಂಕಿಂಗ್‌ನಲ್ಲಿದ್ದರೂ ಬಳಿಕ ಕಳೆಗುಂದುತ್ತಿದ್ದಾರೆ. ಈ ಹಂತದಲ್ಲಿ ಚಿಂತನೆ ಅಗತ್ಯವಿದೆ. ಮಕ್ಕಳು ಏನೇ ಸಮಸ್ಯೆಗಳಿದ್ದರೂ ಪೋಷಕರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಅವರು ಸಂವಿಧಾನದಡಿ ಎಲ್ಲರಿಗೂ ಸಮಾನ ಅವಕಾಶಗಳಿವೆ. ಹೆಣ್ಣುಮಕ್ಕಳು ತಮ್ಮ ಹಕ್ಕುಗಳ ಅರಿವನ್ನು ಪಡೆದುಕೊಳ್ಳಬೇಕು. ಬಾಲ್ಯ ವಿವಾಹವನ್ನು ಹೆಣ್ಣುಮಕ್ಕಳೆ ವಿರೋಧಿಸಬೇಕು. ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ರಕ್ಷಣೆಗೆ ಪೊಲೀಸ್ ಇಲಾಖೆ ಸದಾ ಸಿದ್ದವಿದೆ. ಇಲಾಖೆಯಿಂದ ಎಲ್ಲಾ ಅಗತ್ಯ ನೆರವನ್ನು ನೀಡಲಾಗುವುದು ಎಂದರು.

ಇದೇ ವೇಳೆ ಗಣ್ಯರು ಹೆಣ್ಣುಮಕ್ಕಳ ರಕ್ಷಣೆ ಕುರಿತ ಭಿತ್ತಿಪತ್ರ ಬಿಡುಗಡೆ ಮಾಡಿದರು. ಅಲ್ಲದೆ ಪ್ರತಿಭಾವಂತ ಕ್ರೀಡಾಪಟುಗಳಿಗೆ ಗೌರವಧನ ಚೆಕ್ ವಿತರಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಎಚ್.ಆರ್. ಸುರೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಕೃಷಿ ಇಲಾಖೆ ಉಪನಿರ್ದೇಶಕರಾದ ಸುಷ್ಮಾ, ಪದವಿಪೂರ್ವ ಇಲಾಖೆಯ ಉಪನಿರ್ದೇಶಕರಾದ ಪುಟ್ಟಗೌರಮ್ಮ, ಸಣ್ಣ ಉಳಿತಾಯ ಇಲಾಖೆ ಸಹಾಯಕ ನಿರ್ದೇಶಕರಾದ ತ್ರಿವೇಣ , ಮಕ್ಕಳ ಕಲ್ಯಾಣ ಸಮಿತಿಯ ಲತಾ, ಸ್ವಯಂ ಸೇವಾ ಸಂಸ್ಥೆಯ ಗಂಗಾಧರ್, ಜಿಲ್ಲಾ ನಿರೂಪಣಾಧಿಕಾರಿ ಮಂಜುಳ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಬಜೆಟ್‌ನಲ್ಲಿ ಕೃಷಿ ಪ್ರವಾಸೋದ್ಯಮ ಜಾರಿಗೊಳಿಸಲು ಆಗ್ರಹ

ಚಾಮರಾಜನಗರ, ಪ್ರವಾಸೋದ್ಯಮ ಕ್ಷೇತ್ರ ಬೆಳೆದಂತೆಲ್ಲ ಹೆಚ್ಚಿನ ಜನರು ಕಾಡಿನ ಮೇಲೆ ವ್ಯಾಮೋಹ ಹೆಚ್ಚಾಗುತ್ತಿದ್ದು, ವನ್ಯಜೀವಿಗಳು ನಾಡಿನತ್ತ ಮುಖ ಮಾಡುವುದನ್ನು ತಪ್ಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಕೃಷಿ ಪ್ರವಾಸೋದ್ಯಮ ಅನುಷ್ಠಾನಕ್ಕೆ ಮುಂದಾಗಬೇಕು ಎಂದು ರೈತ ಮುಖಂಡ ಹೊನ್ನೂರು ಪ್ರಕಾಶ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರವಾಸಿಗಳು ಹೆಚ್ಚು ಕಾಡು ಪ್ರವೇಶ ಮಾಡುವರ ಸಂಖ್ಯೆ ಹೆಚ್ಚಾಗಿ ಕಾಡಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅವಲಂಬನೆ ಜಾಸ್ತಿಯಾಗುತ್ತಿರುವುದರಿಂದ ವನ್ಯಜೀವಿಗಳು ನಾಡಿನತ್ತ ಮುಖ ಮಾಡುತ್ತಿವೆ. ನಿತ್ಯವೂ ಒಂದಲ್ಲ ಒಂದು ಕಡೆ ನಾಡಿನತ್ತ ಮುಖ ಮಾಡುತ್ತಿದ್ದು, ಮಾನವ – ವನ್ಯಜೀವಿ ಸಂಘರ್ಷ ಹೆಚ್ಚಾಗಿ ಜಾನುವಾರುಗಳು ಮತ್ತು ಮಾನವನ ಬಲಿ ಪ್ರಕರಣಗಳು ಮೈಸೂರು ಚಾಮರಾಜನಗರ ಜಿಲ್ಲೆಯ ಕಾಡಂಚಿನಲ್ಲಿ ಹೆಚ್ಚಾದ ಪರಿಣಾಮ ಸಫಾರಿಯೇ ಬಂದ್ ಆಗಿದೆ.

ಈ ನಿಟ್ಟಿನಲ್ಲಿ ಅರಣ್ಯದ ಮೇಲಿನ ಒತ್ತಡ ತಗ್ಗಿಸಲು, ಪ್ರವಾಸಿಗರು ಸಾಕು ಪ್ರಾಣಿಗಳು ಮತ್ತು ಕೃಷಿ ಬಗ್ಗೆ ಒಡನಾಟ ಹೆಚ್ಚಿಸಿಕೊಳ್ಳುವ ನೆರವಾಗುವ ನಿಟ್ಟಿನಲ್ಲಿ ಕೃಷಿ ಪ್ರವಾಸೋದ್ಯಮ




ಪ್ರೊ?ರೀತ್ಸಾಹಿಸಬೇಕಿದೆ. ಈ ನಿಟ್ಟಿನಲ್ಲಿ ರೈತರಿಗೂ ನೆರವಾಗುವ ನಿಟ್ಟಿನಲ್ಲಿ ಅವರು ಬೇಸಾಯದ ಜೊತೆಗೆ ಆದಾಯ ಗಳಿಸಲು ಈ ಬಜೆಟ್‌ನಲ್ಲಿ ಕೃಷಿ ಪ್ರವಾಸೋದ್ಯಮದ ಮೂಲಕ ರೈತರ ತೋಟ ಪ್ರವಾಸಿಗರಿಗೆ ಕೃಷಿ ಪಾಠ ಯೋಜನೆ ಜಾರಿ ಮಾಡಿ ಪ್ರತಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲೂ ಮಹಾತ್ಮಗಾಂಧಿ ಕೃಷಿ ಪ್ರವಾಸೋದ್ಯಮ ತಾಣಗಳನ್ನು ಶೇ. 100ರಷ್ಟು ಪ್ರೊ?ರತ್ಸಾಹ ಧನ ನೀಡುವ ಮೂಲಕ ಸ್ಥಾಪಿಸಲು ಮುಂದಾಗಬೇಕಿದೆ ಎಂದು ತಿಳಿಸಿದರು.

ಕೃಷಿ ಪ್ರವಾಸೋದ್ಯಮ ತಜ್ಞ ಶ್ರೀವತ್ಸ ಗೋವಿಂದರಾಜು ಮಾತನಾಡಿ, ಕೃಷಿ ಪ್ರವಾಸೋದ್ಯಮ ಚಟುವಟಿಕೆ ಕೈಗೊಂಡರೆ ಮೊದಲಿಗೆ ರೈತನ ಪೂರ್ಣ ಕುಟುಂಬ ಜಮೀನಿನಲ್ಲಿ ನೆಲೆಸುತ್ತೆ. ಜಮೀನಿನಲ್ಲಿ ಅತಿಥಿಗಳಿಗೆ ಪರಿಚಯಿಸಲಾದರೂ ಸಮಗ್ರ ಕೃಷಿ ಅಳವಡಿಕೆಯಾಗುತ್ತದೆ. ಹಸು,ಕುರಿ,ಕೋಳಿ ಗಿಡ ಮರಗಳಿಂದ ಜೀವ ಹಾಗೂ ಸಸ್ಯ ವೈವಿಧ್ಯ ಸೃಷ್ಟಿಯಾಗುತ್ತೆ. ಆದಾಯದ ಮೂಲ ಜಾಸ್ತಿಯಾಗಿ, ಕೀಟರೋಗಗಳ ಬಾಧೆ ಕಡಿಮೆಯಾಗುತ್ತೆ. ಮುದುಕರಿಂದ ಮಕ್ಕಳವರೆಗೂ ರೈತಾಪಿ ಕುಟುಂಬದ ಎಲ್ಲರಿಗೂ ಕೆಲಸ ಸಿಗುತ್ತೆ. ಅತಿಥಿಗಳ ನೆಪದಲ್ಲಿ ರೈತರ ಕುಟುಂಬ ಸಹಾ ವೈವಿದ್ಯಮಯ ಆಹಾರ ಸವಿಯಲು ಸಾಧ್ಯ ಎಂದರು.

ಕೃಷಿ ಪ್ರವಾಸೋದ್ಯಮ ತಜ್ಞ ಶ್ರೀವತ್ಸ ಗೋವಿಂದರಾಜು ಮಾತನಾಡಿ, ರೈತಾಪಿ ಕುಟುಂಬದ ಯುವಜನರಿಗೆ ಅತಿಥಿಗಳಿಗೆ ಸುತ್ತಮುತ್ತಲಿನ ತಾಣಗಳನ್ನು ಪರಿಚಯಿಸುವ,ಹಳ್ಳಿಯ ಸಂಸ್ಕೃತಿಗಳ ಪರಿಚಯಿಸುವ ಕೆಲಸ. ಹಿರಿಯ ರೈತರಿಗೆ ವ್ಯವಸಾಯದ ಬದುಕು ಕಲಿಸುವ ಕೆಲಸ. ಮಹಿಳೆಯರಿಗೆ ಹಳ್ಳಿಯ ತಿಂಡಿತಿನಿಸು ಮಾಡುವ, ಹೇಳಿಕೊಡುವ ಕಾಯಕ. ವೃದ್ಧರಿಗೆ ಜನಪದ ಸಂಸ್ಕೃತಿಗಳ ಪರಿಚಯಿಸುವ ಕೆಲಸ. ಸ್ಥಳೀಯ ಕಲಾವಿದರಿಗೆ, ಪ್ರಯಾಣ ವಾಹನಗಳ ಚಾಲಕರಿಗೆ, ಮಾಲೀಕರಿಗೆ, ಪ್ರವಾಸೀ ಗೈಡ್‌ಗಳಿಗೂ ಕೆಲಸ. ಹಳ್ಳಿಯ ಕೆರೆ ಕಟ್ಟೆಗಳಲ್ಲಿ ನಾಡ ಹಕ್ಕಿಗಳ ಕಲರವ ಕಾಣಬಹುದು ಎಂದು ತಿಳಿಸಿದರು.

ಕೋಟೆಕೆರೆ ಕೃಷಿ ಪ್ರವಾಸೋದ್ಯಮಿ ರೈತ ಶೇಷಕುಮಾರ್, ನಾಣ್ಯಗಳ ಸಂಗ್ರಾಹಕ ಎಚ್.ಪಿ. ರಾಮಚಂದ್ರ, ಪತ್ರಕರ್ತ ಜಿ.ದೇವರಾಜನಾಯ್ಡು ವಮಾತನಾಡಿದರು.ಪತ್ರಕರ್ತ ಜಿ. ದೇವರಾಜನಾಯ್ಡು, ರೈತ ಮುಖಂಡ ಚೆಂಗಡಿ ಕರಿಯಪ್ಪ ಇದ್ದರು.

## ಡ್ರಗ್ ನಂಟು: ಪೊಲೀಸರು ವಿಫಲ

ಕಾನೂನು ವ್ಯವಸ್ಥೆ ಹದಗೆಟ್ಟಿರುವುದನ್ನು ತೋರುತ್ತಿದೆ. ಸಿಎಂ ಸಿದ್ದರಾಮಯ್ಯ ಅವರು ಈ ಪ್ರಕರಣಗಳನ್ನು ಸವಾಲು ಆಗಿ ತೆಗೆದುಕೊಳ್ಳಲಿ. ಡ್ರಗ್ಸ್ ಜಾಲ, ಅಪ್ರಾಪ್ತೆ ಅತ್ಯಾಚಾರ ಕೊಲೆ, ಗ್ಯಾಂಗ್ ವಾರ್ ಸೇರಿ ಕೊಲೆ ಪ್ರಕರಣಗಳು ತಿಂಗಳಲ್ಲಿ ಒಂದೊಂದು ಸಾಮಾನ್ಯವಾಗಿವೆ. ಉದಯಗಿರಿ ಪೊಲೀಸ್ ಠಾಣೆಗೆ ಕಲ್ಲು ಒಡೆದು ಠಾಣೆಗೆ ಗೌರವ ಇಲ್ಲದಂತಹ ಸ್ಥಿತಿ ಇದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಕಠಿಣವಾಗಿ ಜನರ ಮುಂದೆ ಹೋರಾಟ ಮಾಡುತ್ತೇವೆಂದು ಹೇಳಿದರು.

ನನ್ನ ಅವಧಿಯಲ್ಲಿ ಮಣಿಪಾಲ್ ಫ್ಲೈಓವರ್ ಕಾಮಗಾರಿ, ಕುಶಾಲನಗರ ಹೆದ್ದಾರಿ, ಕಾರಂಜಿ ಕೆರೆ ಸುತ್ತಲೂ ಇಕೋ ಟೂರಿಸಂ ಹಾಗೂ 3 ಕೋಟಿ ಪಾರಂಪರಿಕ ಟಾಂಗಾ ಸವಾರಿ ಉಳಿಸಿಕೊಳ್ಳುವ, ಹೊಸ ರೈಲ್ವೆ ಯಾರ್ಡ್, ವಂದೇ ಭಾರತ್, ಟರ್ಮಿನಲ್ ರನ್ ವೇ ಸೇರಿದಂತೆ ಹಲವು ಯೋಜನೆ ತಂದಿದ್ದೇನೆ. ಈ ಬಾರಿ ಬಜೆಟ್‌ನಲ್ಲಿ ದಕ್ಷಿಣ ಗಂಗೆ ಎಂದೆ ಕರೆಸಿಕೊಳ್ಳುವ ಕಾವೇರಿ ನದಿ ರಕ್ಷಣೆಗೆ ಚೌಕಟ್ಟು ಮಾಡಲು ಕೇಳಿದ್ದೇನೆ ಎಂದು ಯದುವೀರ್ ತಿಳಿಸಿದರು.

## ನಾಲ್ವರ ಸ್ಥಿತಿ ಗಂಭೀರ

ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಫೋಟಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ.

## ಸ್ಫೋಟ ಪ್ರಕರಣ: ಸಮಗ್ರ ತನಿಖೆಗೆ ಖಂಡ್ರೆ ಸೂಚನೆ

ಉದ್ದೇಶಕ್ಕೆ ಅದು ಬಳಕೆಯಾಗುತ್ತಿತ್ತು ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಸ್ಫೋಟಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಸಚಿವರು ಸೂಚಿಸಿದ್ದಾರೆ.

## ಗ್ರಾಮಾಂತರ ಪೊಲೀಸರ ದಾಳಿ

ಕಟ್ಟಡದಲ್ಲಿ ನಾನಾ ಕಂಪನಿಯ 11 ಸ್ಮಾರ್ಟ್ ಎನ್ ಪತ್ತೆಯಾಗಿವೆ. ಕಪ್ಪು ಬಣ್ಣದ 360 ಗ್ರಾಂ ತೂಕದ ಪುಡಿ, 54 ಗ್ರಾಂ ತೂಕದ ಬಿಳಿ ಬಣ್ಣದ ಪುಡಿ, 957 ಗ್ರಾಂ ತೂಕದ ಬಿಳಿ ಬಣ್ಣದ ಪುಡಿ, 2933 ಗ್ರಾಂ ತೂಕದ ಗಸಗಸೆ ಮಾದರಿ ವಸ್ತು, ಕಪ್ಪು ಬಣ್ಣದ ಪೇಸ್ಟ್ ಮಾದರಿಯ ವಸ್ತು, ಬೋರಿಕ್ ಆಸಿಡ್ ಪತ್ತೆಯಾಗಿದೆ. ಇದರೊಂದಿಗೆ 13 ನೀಲಿ ಬಣ್ಣದ ಕ್ಯಾನ್‌ಗಳಲ್ಲಿ ಬಿಳಿ ಬಣ್ಣದ ಪೌಡರ್ ಸಿಕ್ಕಿದೆ. ಅವುಗಳನ್ನು ವಶಪಡಿಸಿಕೊಂಡು ಎಫ್‌ಎಸ್‌ಎಲ್‌ಪರೀಕ್ಷೆಗೆ ಕಳಿಸಿಕೊಟ್ಟಿದ್ದಾರೆ.

# ಕನ್ನಡದಲ್ಲಿ ಶಿಕ್ಷಣಕ್ಕೆ ಶ್ರಮಿಸಿದ ಕುವೆಂಪು: ರಾಮೇಗೌಡ

ಮೈಸೂರು: ಕನ್ನಡ ಆಡಳಿತ ಭಾಷೆಯಾಗಬೇಕು ಮತ್ತು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ದೊರೆಯಬೇಕು ಎಂದ ರಾಷ್ಟ್ರಕವಿ ಕುವೆಂಪು ಮಹಾನ್ ಪುರುಷ ಎಂದು ವಿದ್ವಾಂಸ ಪ್ರೊ.ರಾಮೇಗೌಡ (ರಾಗೌ) ಹೇಳಿದರು.

ಮಾನಸಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಶನಿವಾರ ನಡೆದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿ, ಕನ್ನಡದ ಚಳವಳಿಗೆ ಕುವೆಂಪು ಕವಿತೆಗಳ ಮೂಲಕ ಬೆಂಬಲ ಕೊಟ್ಟರು ಎಂದು ಹೇಳಿದರು. ಕುವೆಂಪು ಅವರು ತ್ರಿ ಭಾಷಾ ಶಿಕ್ಷಣ ಬೇಡ ದ್ವಿ ಭಾಷಾ ಶಿಕ್ಷಣ ಬೇಕು ಎಂದವರು. ಕನ್ನಡದ ಮಾತು ತಲೆ ಎತ್ತುವ ಬಗೆ ಇಂದಿಗೂ ಇದು ಅನ್ವಯವಾಗುತ್ತದೆ. ಯಾಕೆಂದರೆ ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರೇ ಕಡಿಮೆಯಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾನಸಗಂಗೋತ್ರಿ ಕಟ್ಟಿದ ಕುವೆಂಪು ಮಹಾನ್ ಪುರುಷ, ಕುವೆಂಪು, ಮೈಸೂರು ವಿವಿಗೆ ಕುಲಪತಿಯಾಗಿ ಸಾಕಷ್ಟು ಕೆಲಸ ಮಾಡಿದರು. ವೆಂಕಣ್ಣಯ್ಯ ಅವರು ಕನ್ನಡದ ಮೊದಲ ಪ್ರಾಧ್ಯಾಪಕರಾಗಿದ್ದರು ಇವರ ಶಿಷ್ಯರೇ ಕುವೆಂಪು ಆಗಿದ್ದಾರೆ. ಕುವೆಂಪು ಅವರು ತಾವೇ ಹೆಸರಿಟ್ಟ ಹುಡುಗಿಯನ್ನು ಮದುವೆಯಾಗುತ್ತಾರೆ. ಅವರೇ




ಹೇಮಾವತಿ. ಕುವೆಂಪು ಅವರು ರಾಮಕೃಷ್ಣ ಆಶ್ರಮಕ್ಕೆ ಹೋಗಲು ಕಾರಣ ಸಿದ?ದೇಶ್ವರ ಆನಂದ ಕಾರಣ.ಪ್ರೌಢ ಶಾಲೆಯಲ್ಲಿ ಇರುವಾಗಲೇ ಇಂಗ್ಲಿಷ್ ಕವಿತೆ ಬರೆಯಲು ಪ್ರಾರಂಭಿಸಿ ತದನಂತರ ಕನ್ನಡ ಭಾಷೆಯಲ್ಲಿ ಬರೆಯಲು ಪ್ರಾರಂಭಿಸಿದರು ಎಂದು ಒಡನಾಟವನ್ನು ಸ್ಮರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಮಾತನಾಡಿ, ಬಾಲ್ಯದಿಂದಲೂ ಕುವೆಂಪು ಅವರ ಸಾಹಿತ್ಯವನ್ನು ಓದಿ ಬೆಳೆದವನು ನಾನು. ಕುವೆಂಪು ಅವರು ಇದೇ ವಿವಿಯಲ್ಲಿ ಎಂಎ ವಿದ್ಯಾಭ್ಯಾಸ ಮಾಡಿ ಕುಲಪತಿಗಳಾಗಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಕುವೆಂಪು ಅವರು ಮಾಡಿದ ಶಿಕ್ಷಣದ ಕೃಷಿ ಬಹಳ ಹೆಮ್ಮರವಾಗಿ ಬೆಳೆದಿದೆ. ನಾನು ಸಾಕಷ್ಟು ವಿವಿಗಳನ್ನು ನೋಡಿದ್ದೇನೆ. ಆದರೆ ಮಾನಸಗಂಗೋತ್ರಿಯ ರೀತಿಯ ಯಾವ ವಿವಿಯೂ ಇಲ್ಲ ಎಂದರು. ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಅಧ್ಯಕ್ಷತೆ ವಹಿಸಿದ್ದರು. ಪ್ರಸಾರಾಂಗದ ಅಧೀಕ್ಷಕರಾದ ಚನ್ನಬಸಪ್ಪ, ಕಲಾವಿದರಾದ ಡಾ.ಅಮ್ಮ ರಾಮಚಂದ್ರ, ಡಾ.ಸುಂದರೇಶ್ ಇದ್ದರು.

## ದಲಿತರನ್ನು ಸುಲಿಗೆ ಮಾಡುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

ಗುಂಡ್ಲುಪೇಟೆ: ಎಸ್ಸಿ– ಒಳ ಮೀಸಲಾತಿ ಪ್ರವರ್ಗ –ಎ, ಬಿ, ಸಿ ಪ್ರಮಾಣ ಪತ್ರಗಳ ಶುಲ್ಕ ಏರಿಕೆ ಮಾಡಿ ದಲಿತರನ್ನು ಸುಲಿಗೆ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ತಿಂಗಳುಗಳ ಹಿಂದೆಯಷ್ಟೇ ರಾಜ್ಯ ಸರ್ಕಾರ ಪರಿಶಿಷ್ಟ ಒಳ



ಮೀಸಲಾತಿಗಳ ಮೀಸಲಾತಿಯನ್ನು ಪ್ರವರ್ಗ ಎ, ಬಿ, ಸಿ ಎಂದು ಮೂರು ಗುಂಪುಗಳಾಗಿ ವಿಂಗಡಿಸಿ ಆದೇಶ ಹೊರಡಿಸಿದೆ. ತದನಂತರ ನಮ್ಮ ಜನರು ತಮ್ಮಗಳ ಮುಂದಿನ ಶೈಕ್ಷಣಿಕ ಹಾಗೂ ಔದ್ಯೋಗಿಕ ಸಮಾನ ಸವಲತ್ತುಗಳನ್ನು ಪಡೆಯಲು ಪ್ರವರ್ಗ ಎ,ಬಿ, ಸಿ ಗಳ ಪ್ರಮಾಣ ಪತ್ರಗಳನ್ನು ತಲಾ ಸರ್ಕಾರಿ ಛಾಪ ಕಾಗದದ ಬೆಲೆ 120 ರೂಪಾಯಿ ಹಾಗೂ ಆಫೀಡವಿಟ್ ಇನ್ನಿತರ ಖರ್ಚುಗಳು 100 ರೂಪಾಯಿ ಅಂದರೆ ಒಟ್ಟು 220 ರೂಪಾಯಿಗಳು ಒಬ್ಬ ವ್ಯಕ್ತಿಗೆ ತಗಲುತ್ತದೆ. ಇದರಿಂದ ರಾಜ್ಯದ ಪರಿಶಿಷ್ಟರ ಜನಸಂಖ್ಯೆ 1 ಕೋಟಿ ಆಗಿದ್ದಲ್ಲಿ ಸರ್ಕಾರ 220 ಕೋಟಿ ರೂಪಾಯಿಗಳ ದಲಿತರ ಕೂಲಿ ಕಾರ್ಮಿಕರ ಬೆವರಿನ ಹಣವನ್ನು ಕೊಳ್ಳೆ ಹೊಡೆಯಲು ಸಂಚು ರೂಪಿಸಿದೆ ಎಂದಿದ್ದಾರೆ.

ಸುಮಾರು ಐವತ್ತು ಸಾವಿರ ಕೋಟಿ ಎಸ್ ಈಪಿ/ಟಿಎಸ್ ಪಿ ಹಣವನ್ನು ಲಪಟಾಯಿಸುವುದಲ್ಲದೆ, ನಮ್ಮ ಜನರ ಬೆವರಿನ ಹಣವನ್ನು ನುಂಗುತ್ತಿರವುದು ಎಷ್ಟು ನ್ಯಾಯ, ಶೀಘ್ರದಲ್ಲೇ ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಆಡಳಿತ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಿ ಎಸ್ ಈಪಿ/ಟಿಎಸ್ ಪಿ ಹಣವನ್ನು ಬಳಸಿ ಸರ್ಕಾರ ಪ್ರಮಾಣ ಪತ್ರ ವಿತರಿಸಿ, ಸಮಸ್ಯೆ ಬಗೆಹರಿಸಬೇಕು ಇಲ್ಲವಾದಲ್ಲಿ ಜಿಲ್ಲೆಯಾದ್ಯಂತ ಎಲ್ಲಾ ತಾಲ್ಲೂಕು ಕಚೇರಿಗಳಿಗೆ ಮುತ್ತಿಗೆ ಹಾಕಿ, ಉಪವಾಸ ಕೂರುತ್ತೇವೆ ಎಂದು ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷರಾದ ಡಾ. ನವೀನ್ ಮೌರ್ಯ ಎಚ್ಚರಿಕೆ ನೀಡಿದ್ದಾರೆ.

## ರಾಮಸಮುದ್ರದಲ್ಲಿ ಮೂಲ ಸೌಕರ್ಯಕ್ಕಾಗಿ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ,ನಗರದ ರಾಮಸಮುದ್ರ ಬಡಾವಣೆಯ 5 ವಾರ್ಡ್ ಗಳಲ್ಲೂ ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಒಳಚರಂಡಿಯ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಬಡಾವಣೆಯ ಬಸ್ ನಿಲ್ದಾಣದಲ್ಲಿ ಸಮಾವೇಶಗೊಂಡ ನಿವಾಸಿಗಳು ಖಾಲಿಬಿಂದಿಗೆ ಹಿಡಿದು ರಸ್ತೆತಡೆ ನಡೆಸಿ, ಜಿಲ್ಲಾಡಳಿತ, ನಗರಸಭೆ, ಶಾಸಕರ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ರಾಮಸಮುದ್ರ ಬಡಾವಣೆಯ 5 ವಾರ್ಡ್‌ಗಳಲ್ಲೂ ಐದಾರು ತಿಂಗಳಿನಿಂದಲ್ಲೂ ಕುಡಿಯುವ ನೀರು ಇಲ್ಲದೆ ತೊಂದರೆ ಅನುಭವಿಸುವಂತಾಗಿದೆ. ರಸ್ತೆ ನಿರ್ಮಾಣಕ್ಕೆ ಟೆಂಡರ್ ಆಗಿ 4 ವರ್ಷಗಳು ಕಳೆದರೂ ಕೂಡ ಅನೇಕ ರಸ್ತೆಗಳನ್ನು ನಗರಸಭೆಯವರು ಇಲ್ಲಿ ಯವರೆಗೂ ಮಾಡಿಲ್ಲ. ಗುತ್ತಿಗೆದಾರರು ಕೆಲಸ ಮಾಡಿಲ್ಲ ಮಳೆ ಬಂದರೆ ನಿವಾಸಿಗಳು ತಿರುಗಾಡು ಬಹಳ ತೊಂದರೆಯಾಗಿದೆ. ಕುಡಿಯುವ ನೀರಿಗಾಗಿ ನಿವಾಸಿಗಳು ಆಗಾಧವಾದ ತೊಂದರೆ ಅನುಭವಿಸುತ್ತಿದ್ದಾರೆ. ಯಾವುದೇ ಬೋರ್‌ವೆಲ್ ದುರಸ್ಥಿ ಪಡಿಸಿಲ್ಲ. ನಗರಸಭೆ ಬಹಳ ದಿವ್ಯನಿರ್ಲಕ್ಷತೆ ವಹಿಸಿದೆ ಎಂದು ಆರೋಪಿಸಿದರು.

ನಗರಸಭೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ರಸ್ತೆ ಕಾಮಗಾರಿಯನ್ನು ಮುಗಿಸಿರುವುದಿಲ್ಲ. ಹಾಗೂ ರಾಮಸಮುದ್ರದ ಪೌರಕಾರ್ಮಿಕರ ಕಾಲೋನಿ ಹತ್ತಿರ ಒಳಚರಂಡಿಯು ಬ್ಲಾಕ್ ಆಗಿ ಒಳಚರಂಡಿಯ ನೀರು ರಸ್ತೆಯ ಮೇಲೆ ಬಂದು ಅವಸ್ಥೆಯಿಂದ ಕೂಡಿದ್ದು ಮಲೀನವಾದ ನೀರಿನಿಂದ ಅಲ್ಲಿನ ನಿವಾಸಿಗಳು ವಾಸಿಸಲು ತುಂಬಾ ತೊಂದರೆಯಾಗಿರುತ್ತದೆ. ಇದರ ಬಗ್ಗೆ ಕೂಡ ನಗರಸಭೆಯ ಅಧಿಕಾರಿಗಳಿಗೆ ತಿಳಿಸಿದ್ದರು ಕೂಡ ಸಮಸ್ಯೆಯನ್ನು ಇನ್ನೂ ಬಗೆಹರಿಸಿರುವುದಿಲ್ಲ. ಹಾಗೂ ರಾಮಸಮುದ್ರದ ಬಡಾವಣೆಯ ದುರ್ಗಿಗುಡಿ ಬೀದಿ, ಹಳ್ಳದಬೀದಿ, ಕುರುಬರ ಬೀದಿ, ಆದಿಜಾಂಬವರ ಬೀದಿ, ನಾಯಕರ ಬೀದಿ ಕೋಟೆಬೀದಿ, ಅಂಬೇಡ್ಕರ್ ಬಡಾವಣೆ, ಚಿಕ್ಕಹೊಸ ಬಡಾವಣೆ ಬೀದಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಅಲ್ಲಿನ ಬೋರ್‌ಗಳು ನೀರಿಲ್ಲದೆ ಬತ್ತಿ ಹೋಗಿರುತ್ತದೆ. ಬೋರ್‌ವೆಲ್‌ಗಳನ್ನು ರೀಬೋರ್ ಮಾಡಬೇಕೆಂದು ಹಲವಾರು ಬಾರಿಮನವಿ ಮಾಡಿದರು ಸಹ ರೀಬೋರ್ ಮಾಡಿರುವುದಿಲ್ಲ. ಹಾಗೂ ಹಲವು ಬೀದಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಚರಂಡಿಯನ್ನು ನಿರ್ಮಾಣ ಮಾಡದೇ ಅವ್ಯವಸ್ಥೆಯಿಂದ ಕೂಡಿರುತ್ತದೆ. ಬಡಾವಣೆಯ ಸಮಸ್ಯೆಗಳನ್ನು ಕೂಡಲೇ ಸರಿಪಡಿಸಬೇಕು ಇಲ್ಲದಿದ್ದರೆ ನಗರಸಭೆಗೆ ಬಡಾವಣೆಯ ನಿವಾಸಿಗಳೊಂದಿಗೆ ಮುತ್ತಿಗೆ ಹಾಕಬೇಕಾಗುತ್ತದೆ ನಗರಸಭೆ,ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು. ಆರ್.ವಿ.ಮಹದೇವಸ್ವಾಮಿ ಮಾತನಾಡಿ, ರಾಮಸಮುದ್ರ ಬಡಾವಣೆಯ 5 ವಾರ್ಡ್‌ಗಳಲ್ಲೂ ಕುಡಿಯುವ ನೀರು, ರಸ್ತೆ ಸಮಸ್ಯೆಯಾಗಿದ್ದು, ನಿವಾಸಿ ತಿರುಗಾಡಲು ತುಂಭಾ ಕಷ್ಟವಾಗಿದ್ದು, ಕುಡಿಯುವ ನೀರು ರಸ್ತೆ ಸೌಲಭ್ಯ ಕಲ್ಪಿಸುವಂತೆ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗಿದೆ. ಶೀಘ್ರದಲ್ಲೇ.ಈ ಸಮಸ್ಯೆ ಬಗೆಹರಿಸಬೇಕು ನಗರೋತ್ಥಾನ ಯೋಜನೆಯಡಿಯ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರಾಮಸಮುದ್ರ ಶಿವು, ಆರ್.ಪುಟ್ಟಮಲ್ಲಪ್ಪ, ಭೃಂಗೇಶ್, ಆರ್.ಡಿ.ಮಹೇಶ್,ವೇಣುಗೋಪಾಲ್, ಹೇಮಂತ್ ಕುಮಾರ್, ಗಿರೀಶ್, ಕುಮಾರ್,ನವೀನ್, ಸೋಮಣ್ಣ, ಚಿನ್ನಸ್ವಾಮಿ, ಮಹದೇವಯ್ಯ, ಹೋಟೆಲ್ ಪುಟ್ಟಣ್ಣ, ಕುಮಾರ್, ಯುವಗಿರಿ, ಅಜಯ್, ರವಿ, ದೇವಣ್ಣ,



# ದಂಟಳ್ಳಿ ಏತ ನೀರಾವರಿ ಯೋಜನೆಗೆ ಆಗ್ರಹ

## ಎರಡು ಸಾವಿರಕ್ಕೂ ಹೆಚ್ಚು ಜನರಿಂದ ರಸ್ತೆ ತಡೆ ನಡೆಸಿ ಬೃಹತ್ ಪ್ರತಿಭಟನೆ



ಹನೂರು: ದಂಟಳ್ಳಿ ಏತ ನೀರಾವರಿ ಯೋಜನೆಗೆ ಡಿ.ಪಿ.ಆರ್ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಯುವ ಮುಖಂಡ ನಿಶಾಂತ್ ನೇತೃತ್ವದಲ್ಲಿ ವಡಕೆಹಳ್ಳ ಗ್ರಾಮದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನರು ರಸ್ತೆ ತಡೆ ನಡೆಸಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಹಾಗೂ ಹನೂರು ವಿಧಾನಸಭಾ ಕ್ಷೇತ್ರದ ಯುವ ಮುಖಂಡ ನಿಶಾಂತ್ ರವರ ಅಭಿಮಾನಿಗಳು ವಡಕೆಹಳ್ಳ ಮಹದೇಶ್ವರ ಬೆಟ್ಟ ಮುಖ್ಯರಸ್ತೆಯಲ್ಲಿ ರಸ್ತೆ ತಡೆ ನಡೆಸಿ ಸರ್ಕಾರ ಹಾಗೂ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ದಂಟಳ್ಳಿ ಗ್ರಾಮದ ಮೂಲಕ ಕುರಟ್ಟಿ ಹೊಸೂರು, ಶೆಟ್ಟಳ್ಳಿ, ಕೌದಳ್ಳಿ, ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಅಂತರ್ಜಲ ಮಟ್ಟ ಹೆಚ್ಚಿಸಲು, ಕುಡಿಯುವ ನೀರಿನ ಭವಣೆ ನೀಗಿಸಲು ದಂಟಳ್ಳಿ ಏತ ನೀರಾವರಿ ಯೋಜನೆ ಅನುಷ್ಠಾನ ಮಾಡಿ ಡಿಪಿಆರ್ ಸಿದ್ದಪಡಿಸುವಂತೆ ಕಳೆದ 96 ದಿನಗಳಿಂದ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ನಡೆಸಲಾಗುತ್ತಿದೆ.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ಎಂ.ಆರ್ ಮಂಜುನಾಥ್ ಜನವರಿ 15ರೊಳಗೆ ಡಿ.ಪಿ.ಆರ್ ಮಾಡಿಸುತ್ತೇನೆ. ಒಂದೊಮ್ಮೆ ಸಾಧ್ಯವಾಗದಿದ್ದರೆ ನಿಮ್ಮ ಜೊತೆ ಹೋರಾಟಕ್ಕೆ ಕೂರುತ್ತೇನೆ ಎಂದು ಭರವಸೆ ನೀಡಿದ್ದರು. ಜೊತೆಗೆ ಇಬ್ಬರು ಜಿಲ್ಲಾಧಿಕಾರಿಗಳು ಭೇಟಿ ನೀಡಿ ಡಿಪಿಆರ್ ಭರವಸೆ ನೀಡಿದ್ದರು, ಎಲ್ಲಾರ ಭರವಸೆಗಳು ಹುಸಿಯಾಗಿರುವುದರಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ಹೊರ ಹಾಕಿದರು. ಯುವ ಮುಖಂಡ ನಿಶಾಂತ್ ಮಾತನಾಡಿ ದಂಟಲ್ಲಿ ಏತ ನೀರಾವರಿ ಯೋಜನೆಯಲ್ಲಿ ಕಳೆದ 96 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ಮಾಡಲಾಗುತ್ತಿದೆ. ಪ್ರತಿಯೊಬ್ಬ ಜನಪ್ರತಿನಿಧಿಗಳು ದಿನಾಂಕ ನಿಗದಿ ಮಾಡಿದರೆ ಹೊರತು ಅದನ್ನು ಅನುಷ್ಠಾನಕ್ಕೆ ತರಲಿಲ್ಲ, ಕಳೆದ 97 ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಬೆಟ್ಟಕ್ಕೆ ಬಂದಿದ್ದರು ಸೌಜನ್ಯಕ್ಕೂ ರೈತರನ್ನು ಮಾತನಾಡಿಸಲಿಲ್ಲ, ರಾಜ್ಯದ ಹಿರಿಯ ಸಚಿವರು ಕೇವಲ ಯೋಜನೆಯ ಬಗ್ಗೆ ಮಾತನಾಡುತ್ತಾರೆ. ಅದರ ಬದಲು ಚೇತ ನೀರಾವರಿ ಯೋಜನೆಯ ಮೂಲಕ ನಮ್ಮ ಭಾಗದ ರೈತರಿಗೆ ಕುಡಿಯುವ ನೀರು ಪೂರೈಕೆ ಮಾಡಿದರೆ ಹೆಚ್ಚಿನ ಅನುಕೂಲವಾಗಲಿದೆ ಮಳೆಗಾಲದ ಸಂದರ್ಭದಲ್ಲಿ ನದಿಯ ಮೂಲಕ ನೂರಾರು ಟಿಎಂಸಿ ಸಮುದ್ರದ ಪಾಲಾಗುತ್ತಿದೆ ಇದರಿಂದ ಆ ಭಾಗದ ರೈತರಿಗೂ ಯಾವುದೇ ಪ್ರಯೋಜನವಾಗುತ್ತಿಲ್ಲ, ಈ ಭಾಗದಲ್ಲಿ ಸಿಗುತ್ತಿರುವ ನೀರಿನಲ್ಲಿ ಫ್ಲೋರೈಡ್ ಅಂಶ ಜಾಸ್ತಿ ಇರುವುದರಿಂದ ಯುವಕರು ಯುವತಿಯರು ಕಿಡ್ನಿ ವೈಫಲ್ಯದಿಂದ ನರಳುತ್ತಿದ್ದಾರೆ. ಯಾವೊಬ್ಬ ಜನಪ್ರತಿನಿಧಿಗಳು ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನೇ ಪ್ರಾರಂಭಿಸಿಲ್ಲ, ಸರ್ಕಾರ ಹನೂರು ಭಾಗವನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ದಟ್ಟ ಅರಣ್ಯದಲ್ಲಿ ನೇತ್ರಾವತಿ ನದಿಯ ಮೂಲಕ ಕೋಲಾರಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ ಆದರೆ ಕೇವಲ ಒಂದುವರೆ ಕಿಲೋಮೀಟರ್ ದೂರದಲ್ಲಿರುವ ನದಿಯಿಂದ ನೀರು ಕೊಡಲು ಸಾಧ್ಯವಾಗುತ್ತಿಲ್ಲ ಅರಣ್ಯ ಸಚಿವರು ಪಾಕಿಸ್ತಾನದವರ ಅಥವಾ ಅಮೆರಿಕದವರ ನಮ್ಮ ಸಮಸ್ಯೆಯನ್ನು ಬಗೆಹರಿಸಿ ಈ ಭಾಗದ ಜನರಿಗೆ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಸಂಚಾಲಕ ಶೈಲೇಂದ್ರ ಮಾತನಾಡಿ ರಾಮಪುರ ಹೋಬಳಿ ವ್ಯಾಪ್ತಿಯಲ್ಲಿ ಕಳೆದ ಹಲವಾರು ವರ್ಷಗಳಿಂದ ಸಮರ್ಪಕ ಮಳೆಯಾಗದ ಪರಿಣಾಮ ಅಂತರ್ಜಲ ಮಟ್ಟ ಕುಸಿತಗೊಂಡಿದೆ ರೈತರು ಬೇರೆ ರಾಜ್ಯಗಳಿಗೆ ಗೂಳೇ ಹೊರಟಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲು 16 ಕಿ.ಮೀ ಅಂತರದಲ್ಲಿರುವ ಕಾವೇರಿ ನದಿಯಿಂದ ದಂಟಹಳ್ಳಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನ ಮಾಡುವಂತೆ 96 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ಮಾಡುತ್ತಿದ್ದೇವೆ ಆದರೆ ಸಂಬಂಧಪಟ್ಟ ಸಚಿವರು, ಸಂಸದರು ಪ್ರತಿಭಟನಾ ಸ್ಥಳಕ್ಕೆ ಬಾರದೆ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಭಾಗದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರವಿಫಲವಾಗಿದೆ ಮುಂದಿನ ದಿನಗಳಲ್ಲಿ ಏತ ನೀರಾವರಿ ಅನುಷ್ಠಾನ ಮಾಡದಿದ್ದರೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಹಿರಿಯ ಮುಖಂಡ ಪೊನ್ನಾಚಿ ಮಹದೇವ ಸ್ವಾಮಿ ಮಾತನಾಡಿ ನೆರೆಯ ತಮಿಳುನಾಡು ರಾಜ್ಯವು ತನ್ನ ರಾಜ್ಯದ ಜನರಿಗೆ ಸಾವಿರಾರು ಎತ್ತರ ಪ್ರದೇಶದಿಂದ ಮೂರು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗಿದೆ ಈ ವ್ಯಾಪ್ತಿಯಲ್ಲಿಯು ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿಯೇ ಪೈಪ್ ಲೈನ್ ಅಳವಡಿಸಿದ್ದಾರೆ ನಮ್ಮ ರಾಜ್ಯಕ್ಕೆ ಒಂದು ಕಾನೂನು ನೆರೆಯ ತಮಿಳು ನಾಡು ರಾಜ್ಯಕ್ಕೆ ಒಂದು ಕಾನೂನು ಇದೆಯೇ ಎಂದು ಪ್ರಶ್ನಿಸಿ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರ ಚರ್ಚೆ ನಡೆಸಿ ಒಂದು ಸೂಕ್ತ ನಿರ್ಧಾರಕ್ಕೆ ಬಂದು ಈ ಭಾಗದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು ಇಲ್ಲದಿದ್ದರೆ ಎಲ್ಲಾ ಹೋರಾಟಕ್ಕೂ ಸಿದ್ಧವಾಗಿದ್ದೇವೆ ಎಂದರು.

ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರ, ಇನ್ಸ್ಪೆಕ್ಟರ್‌ಗಳಾದ ಚಿಕ್ಕರಾಜ ಶೆಟ್ಟಿ, ಆನಂದಮೂರ್ತಿ ಜಗದೀಶ್ ನವೀನ್, ಉಪನಿರೀಕ್ಷಕರುಗಳಾದ ಈಶ್ವರ ರವಿ ಕರಿಬಸಪ್ಪ ಸೇರಿದಂತೆ ಇನ್ನಿತರರು ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ಪ್ರತಿಭಟನೆಯಲ್ಲಿ ತಮಿಳುನಾಡು ರೈತ ಸಂಘದ ರಾಜ್ಯಾಧ್ಯಕ್ಷ ರವಿಕುಮಾರ್ ಗ್ರಾಮ ಘಟಕದ ಅಧ್ಯಕ್ಷ ಅರ್ಪುದರಾಜ್, ಮಾಜಿ ಸೈನಿಕರಾದ ಜೋಸೆಫ್, ಲೂಯಿಸ್ ಪೆರಿಯನಾಯಗಂ, ಮುಖಂಡರಾದ ಗುಂಡಗಾಲ ಬಸವರಾಜಪ್ಪ ಜಿ.ಕೆ ಹೊಸೂರು ಬಸವರಾಜು ಪ್ರೀತಂ, ಚೇತನ್, ಚಂಗವಾಡಿ ರಾಜು ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತ ಮುಖಂಡರು ಮಹಿಳೆಯರು ಮಕ್ಕಳು ಯುವಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### ಪ್ರತಿಭಟನಾಕಾರರ ಮನವೊಲಿಕೆ

**ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್ ಮಾತನಾಡಿ ನೀವು ನಿಮ್ಮ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದೀರಾ ಅದಕ್ಕೆ ನಾವು ಎಲ್ಲ ರೀತಿಯ ಸಹಕಾರ ನೀಡುತ್ತೇವೆ, ಆದರೆ ರಸ್ತೆಯನ್ನು ಬಿಟ್ಟು ಖಾಲಿ ಜಾಗದಲ್ಲಿ ನಿಮ್ಮ ಪ್ರತಿಭಟನೆಯನ್ನು ಮುಂದುವರಿಸಿ ಎಂದು ಮನವಿ ಮಾಡಿಕೊಂಡರು ಆದರೆ ರೈತರು ಇದಕೊಪ್ಪದೆ ರಸ್ತೆಯಲ್ಲಿ ಕುಳಿತಿದ್ದರು. ಪರಿಸ್ಥಿತಿ ಅರಿತಾ ಪೊಲೀಸರು ರೈತರನ್ನು ಮನವೊಲಿಸಿ ರಸ್ತೆಯಲ್ಲಿ ಕುಳಿತಿದ್ದ ರೈತರನ್ನು ಖಾಲಿ ನಿವೇಶನದಲ್ಲಿ ಕೂರಿಸುವಲ್ಲೂ ಯಶಸ್ವಿಯಾದರು ತದನಂತರ ಟ್ರಾಫಿಕ್ ಸಮಸ್ಯೆಯನ್ನು ಬಗೆಹರಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.**

### ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಭೇಟಿ

**ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಪ್ರತಿಭಟನಾಕಾರರ ಮನವಿ ಆಲಿಸಿ ನಂತರ ಮಾತನಾಡಿದ ಅವರು ಈ ಭಾಗದಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿ ಕುಡಿಯುವ ನೀರಿನ ಸಮಸ್ಯೆ ಇರುವುದು ಈಗಾಗಲೇ ಸರ್ಕಾರದ ಗಮನಕ್ಕೆ ತರಲಾಗಿದೆ. ಜಿಲ್ಲಾಧಿಕಾರಿಗಳು ಸಹ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ವರದಿ ನೀಡಿದ್ದಾರೆ ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಚರ್ಚೆ ನಡೆಸಿ ದಿನಾಂಕವನ್ನು ನಿಗದಿ ಮಾಡಿ ರೈತ ಮುಖಂಡರುಗಳ ಜೊತೆ ಚರ್ಚೆ ನಡೆಸಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸಲಾಗುವುದು ಎಂದರು ಆದರೆ ಪ್ರತಿಭಟನಾಕಾರರು ಹಿಂದೆ ದಿನಾಂಕ ನಿಗದಿ ಮಾಡಬೇಕು ಎಂದು ಆಗ್ರಹಿಸಿದರು ಆದರೆ ಹೆಚ್ಚುವರಿ ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವರ ದಿನಾಂಕವನ್ನು ನಾನು ನಿಗದಿ ಮಾಡಲು ಸಾಧ್ಯವಿಲ್ಲ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ದಿನಾಂಕ ನಿಗದಿ ಮಾಡಲಾಗುವುದು ಎಂದು ಭರವಸೆ ನೀಡಿದರು.**

### 2 ಗಂಟೆಗಳಿಗೂ ಹೆಚ್ಚು ಕಾಲ ಟ್ರಾಫಿಕ್ ಜಾಮ್

**ದಂಟಲ್ಲಿ ಏತ ನೀರಾವರಿ ಯೋಜನೆಗೆ ಡಿಪಿಆರ್ ಮಾಡದ ಹಿನ್ನೆಲೆ ರಸ್ತೆ ತಡೆ ನಡೆಸುವುದಾಗಿ ರೈತ ಮುಖಂಡರು ಈಗಾಗಲೇ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ್ದರು ಆದರೂ ಪ್ರತಿಭಟನಾ ಸ್ಥಳಕ್ಕೆ ಸಚಿವರು ಸಂಸದರು ಶಾಸಕರು ಹಾಗೂ ಜಿಲ್ಲಾಧಿಕಾರಿ ಬಾರದೆ ಇದ್ದಿದ್ದರಿಂದ ಆಕ್ರೋಶಗೊಂಡ ರೈತ ಮುಖಂಡರು ಮಲೆ ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ಮುಖ್ಯರಸ್ತೆಯಲ್ಲಿ ಕುಳಿತು ಶಾಮಿಯಾನ ಅಳವಡಿಸಿ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆ ನಡೆಸಿದರು. ಇದರಿಂದ ರಸ್ತೆಯ ಎರಡು ಬದಿಗಳಲ್ಲಿ ಕಿಲೋಮೀಟರ್ಗಟ್ಟಲೆ ವಾಹನಗಳು ನಿಂತು ಟ್ರಾಫಿಕ್ ಜಾಮ್ ಉಂಟಾಯಿತು.**

### 15 ದಿನಗಳ ಕಾಲಾವಕಾಶ

**ಇನ್ನು ಹೆಚ್ಚುವರಿ ಜಿಲ್ಲಾಧಿಕಾರಿ 15 ದಿನಗಳ ಕಾಲಾವಕಾಶ ಕೇಳಿಕೊಂಡಿದ್ದಾರೆ ಒಂದೊಮ್ಮೆ ದಂಟಳ್ಳಿ ಏತ ನೀರಾವರಿ ಯೋಜನೆ ಸಂಬಂಧ ಯಾವುದೇ ಪ್ರಕ್ರಿಯೆಗಳು ಪ್ರಾರಂಭವಾಗದಿದ್ದರೆ ಮತ್ತೊಮ್ಮೆ ರಸ್ತೆ ತಡೆ ನಡೆಸೋಣ ಅಲ್ಲಿಯವರೆಗೆ ಅಹೋರಾತ್ರಿ ಧರಣಿ ಮುಂದುವರಿಸೋಣ ಎಂದು ರೈತ ಮುಖಂಡರುಗಳು ತೀರ್ಮಾನ ತೆಗೆದುಕೊಂಡರು. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು,ಪ್ರಭಾರ ಉಪ ವಿಭಾಗಾಧಿಕಾರಿ ಬಸವರಾಜು, ತಹಸಿಲ್ದಾರ್ ಚೈತ್ರ ಪಾಲ್ಗೊಂಡು ರೈತ ಮುಖಂಡರುಗಳ ಜೊತೆ ಚರ್ಚೆ ನಡೆಸಿದರು.**


## ಕಾಡಾನೆ ದಾಳಿ: ಬೆಳೆ ನಾಶ



ಗುಂಡ್ಲುಪೇಟೆ: ತಾಲ್ಲೂಕಿನ ಕುರುಬರಹುಂಡಿ ಗ್ರಾಮದ ಉಮಾ ಲೋಕೇಶ್ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಹಾಗೂ ತೆಂಗಿನ ತೋಟಕ್ಕೆ ಶುಕ್ರವಾರ ರಾತ್ರಿ ಕಾಡಾನೆಗಳು ನುಗ್ಗಿ ಕಟಾವಿಗೆ ಬಂದಿದ್ದ ಬಾಳೆ ಹಾಗೂ ತೆಂಗು ಬೆಳೆಯನ್ನು ಸಂಪೂರ್ಣತಿಂದು ತುಳಿದು ನಷ್ಟ ಉಂಟು ಮಾಡಿರುವ ಘಟನೆ ನಡೆದಿದೆ.

ಓಂಕಾರ್ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ಹೆಚ್ಚಿದೆ ಕೂಡಲೇ ಅರಣ್ಯ ಅಧಿಕಾರಿಗಳು ಕಾಡಾನೆಗಳನ್ನು ನಿಯಂತ್ರಿಸಿ ರೈತರ ಬೆಳೆಗಳನ್ನು ರಕ್ಷಿಸಲು ಮುಂದಾಗಬೇಕೆಂದು ರೈತ ಕೆ ಆರ್ ಲೋಕೇಶ್ ರವರು ಒತ್ತಾಯಿಸಿದ್ದಾರೆ.

## ನಗರಸಭೆ ಪೌರಾಯುಕ್ತರಾಗಿ ಪರಶರಾಮ್ ಅಧಿಕಾರ ಸ್ವೀಕಾರ



ಚಾಮರಾಜನಗರ, ಚಾಮರಾಜನಗರ ನಗರಸಭೆ ಪೌರಾಯುಕ್ತರಾಗಿ ಪರಶುರಾಮ್ ಎಂ.ಛಲವಾದಿ ಅಧಿಕಾರ ವಹಿಸಿಕೊಂಡರು.

ನಗರಸಭೆ ಪೌರಾಯುಕ್ತರಾಗಿದ್ದ ರಾಮದಾಸ್ ಅವರ ವರ್ಗಾವಣೆಯಿಂದ ತೆರವಾಗಿದ್ದ ಸ್ಥಾನಕ್ಕೆ ಪೌರಾಡಳಿತ ಇಲಾಖೆಯ ಪರಶುರಾಮ್ ಎಂ. ಛಲವಾದಿ ಅವರು ನಿಯೋಜನೆ ಮಾಡಿತ್ತು. ಪರಶುರಾಮ್ ಅವರು ಈ ಹಿಂದೆ ಹಾವೇರಿ ನಗರಸಭೆ ಪೌರಾಯುಕ್ತರಾಗಿದ್ದು. ಸರ್ಕಾರ ಇವರನ್ನು ನೇಮಕ ಮಾಡಿತ್ತು. ನಿನ್ನೆ ಸಾಯಂಕಾಲ ನಗರಸಭೆ ಕಚೇರಿಗೆ ಆಗಮಿಸಿದ ಛಲವಾದಿ ಅವರು ಅಧಿಕಾರ ವಹಿಸಿಕೊಂಡು. ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿದರು.

## ಗ್ರಾಪಂಗೆ ಅಬ್ದುಲ್ ನಜೀರ್ ಸಾಬ್ ಹೆಸರಿಡಿ

ಗುಂಡ್ಲುಪೇಟೆ: ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಅಪಾರ ಕೊಡುಗೆ ನೀಡಿದ ಸಚಿವರಾದ ದಿವಂಗತ ಅಬ್ದುಲ್ ನಜೀರ್ ಸಾಬ್ ಅವರ ಹೆಸರನ್ನು ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಇಡಬೇಕು ಎಂದು ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಒಕ್ಕೂಟದ ಮಾಜಿ ಜಿಲ್ಲಾಧ್ಯಕ್ಷ ಮೂಡ್ನಾಕೂಡು ಪ್ರಕಾಶ್ ಒತ್ತಾಯಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಕರ್ನಾಟಕವು ದೇಶಕ್ಕೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪರಿಚಯಿಸಿದ ಮೊದಲ ರಾಜ್ಯ ಎಂಬ ಐತಿಹಾಸಿಕ ಸತ್ಯವನ್ನು ರಾಜ್ಯ ಸರ್ಕಾರ ಮರೆಯಬಾರದು ಎಂದು ಮನವಿ ಮಾಡಿದರು. ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಎಂದರೆ ಖಾತೆ ಪಡೆಯಲು ಹಿಂಜರಿಯುತ್ತಿದ್ದ ಖಾತೆಯಾಗಿದ್ದು, "ಆಟಕ್ಕುಂಟು ಲೆಕ್ಕಕ್ಕಿಲ್ಲ" ಎನ್ನುವ ಸ್ಥಿತಿ ಇತ್ತು ಎನ್ನಲಾಗಿತ್ತು. ಅಂತಹ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆಯವರು ತಮ್ಮ ಸಚಿವ ಸಂಪುಟದಲ್ಲಿ ಒಬ್ಬ ಮುಸ್ಲಿಂ ಸಮುದಾಯದ ಸಚಿವರಿಗೆ ಅವಕಾಶ ನೀಡಬೇಕು ಎಂಬ ಉದ್ದೇಶದಿಂದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಅಬ್ದುಲ್ ನಜೀರ್ ಸಾಬ್ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯನ್ನು ವಹಿಸಿದ್ದರು.ಆದ್ದರಿಂದ, ಗಾಂಧಿ ಹೆಸರಿನ ರಾಜಕಾರಣವನ್ನು ಬಿಟ್ಟು, ನಿಜವಾದ ಅರ್ಥದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಶ್ರಮಿಸಿದ ದಿವಂಗತ ಅಬ್ದುಲ್ ನಜೀರ್ ಸಾಬ್ ಅವರ ಹೆಸರನ್ನು ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ನಾಮಕರಣ ಮಾಡಬೇಕು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ ಎಂದು ಹೇಳಿದರು.

ಮಾಜಿ ಸಚಿವ ಎನ್.ಮಹೇಶ್ ಕರೆ | ಸಾವಿತ್ರಿಬಾಯಿ ಫುಲೆ ಅವರ 195ನೇ ಜನ್ಮ ದಿನಾಚರಣೆ

# ಸಾವಿತ್ರಿಬಾಯಿ ಫುಲೆ–ಅಂಬೇಡ್ಕರ್ ಸ್ಫೂರ್ತಿಯನ್ನು ಅಳವಡಿಸಿಕೊಳ್ಳೋಣ

ರಾಮನಗರ: ಸಾವಿತ್ರಿಬಾಯಿ ಫುಲೆ ಮತ್ತು ಡಾ.ಬಿ.ಅರ್. ಅಂಬೇಡ್ಕರ್ ಅವರಲ್ಲಿದ್ದ ಬದಲಾವಣೆಯ ಸಕಾರಾತ್ಮಕ ಸ್ಫೂರ್ತಿಯ ಗುಣವನ್ನು ನಾವೆಲ್ಲ ಅಳವಡಸಿಕೊಳ್ಳಬೇಕು ಎಂದು ಮಾಜಿ ಸಚಿವ ಎನ್.ಮಹೇಶ್ ಕರೆ ನೀಡಿದರು.

ನಗರದಲ್ಲಿ ರಾಷ್ಟ್ರೀಯ ಭೀಮ ಪಡೆ ಜಿಲ್ಲಾ ಸಮಿತಿ ವತಿಯಿಂದ ಶನಿವಾರ ನಡೆದ ಸಾವಿತ್ರಿಬಾಯಿ ಫುಲೆ ಅವರ 195ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಿ ಅವರು ಮಾತನಾಡಿದರು. ಸಾವಿತ್ರಿಬಾಯಿ ಫುಲೆ ಮತ್ತು ಅಂಬೇಡ್ಕರ್ ಅವರು ಎದುರಾದ ಕ?ಗಳನ್ನು ದಾಟಿ ಗುರಿ ಮುಟ್ಟಿದ ಜ್ಞಾನದ ಶಿಖರಗಳು ಎಂದರು. ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಪದ್ಧತಿಗಳಿಂದಾಗಿ ಅಸಮಾನತೆ ಹಾಗೆಯೇ ಉಳಿದಿದೆ. ಸಮಾನತೆ ತಂದಾಗ ಮಾತ್ರ ಪ್ರಬುದ್ಧ ಭಾರತ ಕಾಣಲು ಸಾಧ್ಯವಾಗಲಿದೆ. ಸಮಾನತೆ ತರದೆ ಹೋದರೆ ರಾಜಕೀಯ ಸಮಾನತೆ ಅರ್ಥ ಕಳೆದು ಕೊಳ್ಳುತ್ತದೆ. ಅಂಬೇಡ್ಕರ್ ಅವರ ಆಶಯಗಳನ್ನು ಮಣ್ಣುಪಾಲು ಮಾಡುತ್ತಿರುವವರ ವಿರುದ್ಧ ನಾವು ಧ್ವನಿ ಎತ್ತಬೇಕಿದೆ ಎಂದರು.

ಸ್ವಾತಂತ್ರ್ಯದ ನಂತರ ದಲಿತರ ಸಾಕ್ಷರತಾ ಪ್ರಮಾಣ ಶೇಕಡ 4ರಷ್ಟಿತ್ತು. ಈಗ ಅದು ಶೇಖಡ 80ರ?ಗಿದೆ. 2047ಕ್ಕೆ ದಲಿತರು ಸೇರಿದಂತೆ ಎಲ್ಲ ಸಮುದಾಯಗಳ ಸಾಕ್ಷರತೆ ಪ್ರಮಾಣ ಶೇಕಡ



100ರ?ಟ್ಟು ಆಗಲಿದೆ. ನಮ್ಮ ಸಮುದಾಯಗಳ ಬದುಕಿನ ಶಕ್ತಿಯ ಕಡೆಗೆ ಎಲ್ಲರ ಮನಸ್ಸನ್ನು ಸೆಳೆಯಬೇಕಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಭೀಮ ಪಡೆ ಪದಾಧಿಕಾರಿಗಳು ಎಲ್ಲರಿಗೂ ತರಬೇತಿ ಜೊತೆಗೆ ಉಪಯುಕ್ತ ಮಾಹಿತಿಗಳನ್ನು ಹಂಚುವ ಕೆಲಸ ಮಾಡಿದಾಗ ಮಾತ್ರ ನಮ್ಮ ಸಮುದಾಯಕ್ಕೆ ದಾರಿ ದೀಪವಾಗಲಿದೆ ಎಂದರು.

ಸಾನಿಧ್ಯ ವಹಿಸಿದ್ದ ಮೈಸೂರು ಅಶೋಕಪುರಂ ಗುರುಪೀಠದ ಪ್ರೊ. ಜ್ಞಾನ ಸ್ವರೂಪಾನಂದ ಸ್ವಾಮೀಜಿ, ಸಮಾಜದಲ್ಲಿ ಅಸಮಾನತೆ ಹಾಗೂ ಅಸ್ಪೃಶ್ಯತೆಗೆ ಮೂಲ ಕಾರಣವಾಗಿದ್ದ ವರ್ಣ ವ್ಯವಸ್ಥೆ ಮತ್ತು ಜಾತಿ ಪದ್ಧತಿಯನ್ನು ಅಂಬೇಡ್ಕರ್ ರವರು ಬಲವಾಗಿ ವಿರೋಧಿಸಿದವರು. ಜಾತಿ ಆಧಾರಿತ ಶ್ರೇಣೀಕರಣವೂ ಮಾನವ ಹಕ್ಕುಗಳ ಉಲ್ಲಂಘನೆ ಎಂದು ಪ್ರತಿಪಾದಿಸಿದ ಅವರು ಸಂವಿಧಾನದ ಮೂಲಕ ಎಲ್ಲ ವರ್ಗದ ಜನರಿಗೂ ಸಮಾನತೆ ತಂದುಕೊಟ್ಟವರು ಎಂದು ಹೇಳಿದರು.

ಅಂಬೇಡ್ಕರ್ ರವರು ಸಂವಿಧಾನ ರಚಿಸಿ ಪ್ರಾಣಿ ವರ್ಗಕ್ಕಿಂತಲೂ ಕೀಳಾಗಿದ್ದ ದಲಿತ ಸಮುದಾಯವನ್ನು ದೈವಿಕ ಪ್ರಭುತ್ವದಲ್ಲಿ ಕೂರಿಸಿದ ಮಹಾನ್ ನಾಯಕ ಎಂದು ಬಣ್ಣಿಸಿದರು.

ಧಮ್ಮ ದೀವಿಗೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಶೂದ್ರರೆಂಬಕಾರಣಕ್ಕೆ ದಲಿತರಿಗೆ ಕಲಿಕೆಯ ಅವಕಾಶದಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಅಂತಹ ಸಂದರ್ಭದಲ್ಲಿ ಸಾವಿತ್ರಿ ಬಾಯಿ ಫುಲೆ ದಂಪತಿ ಶಿಕ್ಷಣ ಕ್ರಾಂತಿ ಮಾಡುವ ಮೂಲಕ ದೇವಾನುದೇವತೆಗಳನ್ನು ಮೀರಿಸುವ ಸಾಧನೆ ಮಾಡಿದರು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ತಾಲೂಕು ಸಮಾಜ ಕಲ್ಯಾಣಾಧಿಕಾರಿ ಡಾ.ಎಚ್. ಎಸ್.ಕುಮಾರ್, ಜಿಲ್ಲಾ ಕೆಡಿಪಿ ಸದಸ್ಯ ಗುರುಮೂರ್ತಿ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಹರೀಶ್ ಬಾಲು, ರಾಷ್ಟ್ರೀಯ ಭೀಮ ಪಡೆ ರಾಜ್ಯಾಧ್ಯಕ್ಷ ಆತ್ಮಾನಂದ, ಜಿಲ್ಲಾಧ್ಯಕ್ಷ ಭರತ್ ಕುಮಾರ್ , ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಉಪಾಧ್ಯಕ್ಷ ಸೋಮಶೇಖರ್, ಕನಕಪುರ ತಾಲೂಕು ಅಧ್ಯಕ್ಷ ಶಿವರಾಜು, ಬೆಂಗಳೂರು ನಗರ ಅಧ್ಯಕ್ಷೆ ಗಿರಿಜಮ್ಮ, ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಸಂಭ್ರಮ

**ಮಂಡ್ಯ:** ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ ಅಡಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು

## ಬೇಟಿ ಬಚಾವೋ ಬೇಟಿ ಪಡಾವೋ




ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಂಡ್ಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ, ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಮಂಡ್ಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಅರ್ಕೇಶ್ವರ ನಗರ,ಮಂಡ್ಯ ಇವರ ಸಂಯುಕ್ತ ಆಶ್ರಯದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ ಅಡಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಿಇಓ ಶ್ರೀಮತಿ ನಂದಿನಿ ಕೆ .ಆರ್ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಮಂಡ್ಯ .ಇವರು ಉದ್ಘಾಟಿಸಿ, ಮಾತನಾಡಿದರು

ಹೆಣ್ಣು ಗಂಡು ಎನ್ನುವ ಭೇದ ಭಾವ ಮಾಡದೆ ಸಮಾಜದಲ್ಲಿ ಎಲ್ಲರೂ ಕೂಡ ಒಂದೇ ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳಬೇಕು ಆಗ ಮಾತ್ರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಕಾರ್ಯಕ್ರಮಕ್ಕೆ ಅರ್ಥಪೂರ್ಣ ವಾಗಿರುತ್ತದೆ ಎಂದು ಕರೆ ನೀಡಿದರು.

ವೆಂಕಟೇಶ್ ರವರು ಸದಸ್ಯರು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು, ರವರು ಮಾತನಾಡಿ ಮಕ್ಕಳು ದೇಶದ ದೊಡ್ಡ ಸಂಪತು ಹೆಣ್ಣು ಮಕ್ಕಳ ರಕ್ಷಣೆ ಬಹಳ ಮುಖ್ಯ, 2026 ರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ (ಜನವರಿ 24) ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ ಮತ್ತು ಸಬಲೀಕರಣದ ಮೇಲೆ ಕೇಂದ್ರೀಕರಿಸಲಾಗಿದ್ದು, 2026ರಂತೆಯೇ "ಉಜ್ವಲ ಭವಿಷ್ಯಕ್ಕಾಗಿ ಹೆಣ್ಣುಮಕ್ಕಳನ್ನು ಸಬಲೀಕರಣಗೊಳಿಸುವುದು" ಎಂಬ ಆಶಯದ ಮುಂದುವರಿಕೆಯ ಸಾಧ್ಯತೆ ಹೆಚ್ಚಿದೆ.

**ಮುಖ್ಯ ಉದ್ದೇಶ:** ಹೆಣ್ಣು ಮಕ್ಕಳ ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಆರೋಗ್ಯ ರಕ್ಷಣೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು.

ಪ್ರಧಾನಮಂತ್ರಿ ಸಂದೇಶ: ಹೆಣ್ಣು ಮಗು ಘನತೆ, ಅವಕಾಶ ಮತ್ತು ಭರವಸೆಯ ಜೀವನ ನಡೆಸುವಂತೆ ನೋಡಿಕೊಳ್ಳುವ ಸರ್ಕಾರದ ಅಚಲ ಸಂಕಲ್ಪವನ್ನು ಪುನರುಚ್ಚರಿಸಲಾಗಿದೆ.

**ಆಚರಣೆ:** ಬಾಲ್ಯವಿವಾಹ, ಹೆಣ್ಣು ಭ್ರೂಣಹತ್ಯೆ ಮತ್ತು ಲಿಂಗ ಅಸಮಾನತೆಯಂತಹ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ದಲ್ಲಿ ಶ್ರೀ ಬಸವಗೌಡ ಪ್ರಾಂಶುಪಾಲರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಅರ್ಕೇಶ್ವರ ನಗರ ಮಂಡ್ಯ, ಶ್ರೀ ಮಹದೇವ್ , ಕ್ಷೇತ್ರ ಶಿಕ್ಷಣಾಧಿಕಾರಿಗಳು, ದಕ್ಷಿಣ ವಲಯ ಮಂಡ್ಯ ಹಾಗೂ ಮಹಿಳಾ ಸಬಲೀಕರಣ ಘಟಕದ ಸಿಬ್ಬಂದಿಗಳು ಕಾಲೇಜಿನ ವಿದ್ಯಾರ್ಥಿಗಳು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ಮುಖ್ಯೋಪಾಧ್ಯಾಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

## ಮಹಿಳೆಯರು ನಿರಾತಂಕವಾಗಿ ಪತ್ರಿಕೋದ್ಯಮ ಕ್ಷೇತ್ರ ಪ್ರವೇಶಿಸಲಿ: ಪತ್ರಕರ್ತೆ ಅಶ್ವಿನಿ ಶ್ರೀಪಾದ್ ಅಭಿಮತ




**ಮೈಸೂರು:** ಮಹಿಳೆಯರು ಪತ್ರಿಕೋದ್ಯಮ ಕ್ಷೇತ್ರವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸಬೇಕು. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಮಹಿಳಾ ಪತ್ರಕರ್ತರು ಈ ಹಿಂದೆ ಎದುರಿಸಿದ ಸವಾಲುಗಳು ಈಗ ಕಡಿಮೆಯಾಗಿವೆ ಎಂದು ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯ ಅಸೋಸಿಯೇಟ್ ಎಡಿಟರ್ ಅಶ್ವಿನಿ ಎಂ.ಶ್ರೀಪಾದ್ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಹಾಗೂ ಮೇಲುಕೋಟೆಯ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಹಿರಿಯ ಸ್ವಾತಂತ್ರ್ಯಯೋಧ, ಹೆಸರಾಂತ ಪತ್ರಕರ್ತ ಖಾದ್ರಿ ಶಾಮಣ್ಣ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಮಹಿಳಾ ಪತ್ರಕರ್ತರ ದೃಷ್ಟಿಯಲ್ಲಿ ಮಾಧ್ಯಮ ವಿಷಯ ಕುರಿತು ಅವರು ಮಾತನಾಡಿದರು.

ಮಾಧ್ಯಮ ಕ್ಷೇತ್ರದಲ್ಲಿ ಒಂದು ಕಾಲದಲ್ಲಿ ಮಹಿಳಾ ಪತ್ರಕರ್ತರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು. ಆದರೆ, ಇವತ್ತು ಕಾಲ ಬದಲಾಗಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮಾಧ್ಯಮದಲ್ಲಿ ಇದ್ದಾರೆ. ಈ ಸಂಖ್ಯೆ ಇನ್ನೂ ಅಧಿಕವಾಗಬೇಕು. ರಾಜಕೀಯ ವರದಿಗಾರಿಕೆಯಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಸಿಕೊಂಡಿಲ್ಲ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ರಂಗದ ವರದಿಗಾರಿಕೆಯನ್ನು ಮಾಡುವಂತಾಗಬೇಕು ಎಂದು ಅಶ್ವಿನಿ ಶ್ರೀಪಾದ್ ನುಡಿದರು.

ರೀಲ್ಸ್, ವಾಟ್ಸಪ್‌ನಲ್ಲಿ ಬರುವುದೆಲ್ಲವೂ ಸುದ್ದಿಯಲ್ಲ. ಅವುಗಳಲ್ಲಿ ಹೆಚ್ಚಿನವು ಅವರ ಅಭಿಪ್ರಾಯಗಳಾಗಿರುತ್ತವೆ. ಸುದ್ದಿಯನ್ನು ಸುದ್ದಿಯ ಹಾಗೇ ಬರೆಯಬೇಕು. ಹೆಣ್ಣುಮಕ್ಕಳು ಈ ಬಗ್ಗೆ ಗಮನ ಹರಿಸಬೇಕು. ಪತ್ರಿಕೋದ್ಯಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು ಎಂದರು.

ಮಹಿಳಾ ಪತ್ರಕರ್ತರು ಸಮಸ್ಯೆಯನ್ನು ಸಮಸ್ಯೆಯನ್ನಾಗಿಯೇ ನೋಡುತ್ತಾರೆ. ಅವರು ಸುದ್ದಿಯನ್ನು ನೋಡುವ ಬಗೆಯೂ ಸ್ವಲ್ಪ ಭಿನ್ನ. ಯಾವುದೇ ಒಂದು ವಿಷಯದ ಬಗ್ಗೆ ಬರೆಯಲು ಕುಳಿತಾಗ ಅದರಲ್ಲಿರುವ ಮಾನವೀಯ ದೃಷ್ಟಿಕೋನವು ಮಹಿಳೆ ಪತ್ರಕರ್ತರಿಗೆ ಹೆಚ್ಚು ಕಾಣುತ್ತದೆ ಎಂದು ಕೆಲವು ಉದಾಹರಣೆಗಳ ಸಮೇತ ವಿವರಿಸಿದರು. ನಂತರ ಅವರು ವಿದ್ಯಾರ್ಥಿನಿಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಅಸ್ಸಾಂ ರಾಜ್ಯದ ಸಿಲ್ಚಾರ್‌ನ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಸಮ ಕುಲಪತಿ ಪ್ರೊ.ಕೆ.ವಿ.ನಾಗರಾಜ್ ಅವರು ಸಮಾರಂಭ ಉದ್ಘಾಟಿಸಿ ಖಾದ್ರಿ ಶಾಮಣ್ಣನವರ ಬದುಕು, ಬರಹವನ್ನು ವಿವರಿಸಿದರು. ಖಾದ್ರಿ ಶಾಮಣ್ಣನವರಿಗೆ ಸಂಸ್ಕೃತದ ಹಿನ್ನೆಲೆಯಿದ್ದ ಕಾರಣಕ್ಕೆ ಕನ್ನಡ ಭಾಷೆಯ ಮೇಲೆಯೂ ಪ್ರಭುತ್ವವಿತ್ತು. ಖಾದ್ರಿ ಶಾಮಣ್ಣನವರ ಸಂಪಾದಕೀಯ ಬರಹಗಳನ್ನು ವಿದ್ಯಾರ್ಥಿಗಳು ಓದಬೇಕು ಎಂದರು.

ಪತ್ರಕರ್ತರು ಭಾಷೆಯನ್ನು ಚೆನ್ನಾಗಿ ದುಡಿಸಿಕೊಳ್ಳಬೇಕು. ಭಾಷೆಯ ಮೇಲೆ ಪ್ರಬಲವಾದ ಹಿಡಿತವಿದ್ದಾಗ ಮಾತ್ರ ಯಶಸ್ವಿ ಪತ್ರಕರ್ತನಾಗಲು ಸಾಧ್ಯ. ಟೀವಿ ಚಾನೆಲ್‌ಗಳು ಆರಂಭವಾದ ನಂತರ ಭಾಷೆ ಹಾಳಾಗುತ್ತಿದೆ ಎಂದರು.

ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಎಸ್.ಅನಿತಾ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಖಾದ್ರಿ ಶಾಮಣ್ಣ ಅವರ ಸ್ವಾತಂತ್ರ್ಯ ಹೋರಾಟದ ಬದುಕು ಹಾಗೂ ಪತ್ರಕರ್ತರಾಗಿ ಅವರ ಸಾಮಾಜಿಕ ಕಳಕಳಿಯನ್ನು ಮೆಲುಕು ಹಾಕಿದರು. ಖಾದ್ರಿ ಶಾಮಣ್ಣ ಅವರ ಧೀಮಂತ ವ್ಯಕ್ತಿತ್ವವನ್ನು ವಿದ್ಯಾರ್ಥಿನಿಯರಿಗೆ ವಿವರಿಸಿದರು. ಖಾದ್ರಿ ಶಾಮಣ್ಣ ಅವರ ಆಕರ್ಷಕ ಶೈಲಿಯ ಬರಹ, ಭಾಷೆಯ ಮೇಲಿನ ಅವರ ಪ್ರಭುತ್ವವನ್ನು ಕೊಂಡಾಡಿದರು.

ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಅಧ್ಯಕ್ಷ, ಹಿರಿಯ ಪತ್ರಕರ್ತ ಎಚ್.ಆರ್.ಶ್ರೀಶ ಅವರು ಮಾತನಾಡಿ ಖಾದ್ರಿ ಶಾಮಣ್ಣ ಅವರಿಗೆ ಬದುಕು, ಬರಹ ಎರಡೂ ಒಂದೇ ಆಗಿತ್ತು. ಪತ್ರಕರ್ತ ಅಜಾತಶತ್ರುವಲ್ಲ. ಪತ್ರಿಕೋದ್ಯಮ ಎಂಬುದು ಕೇವಲ ಪದವಿ ಅಲ್ಲ. ಇದು ವೃತ್ತಿಪರ ಶಿಕ್ಷಣ. ವೃತ್ತಿಯಲ್ಲಿ ಕಲಿಯುವ ಪಾಠ ಬಹು ದೊಡ್ಡದು ಎಂದರು. ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ, ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ.ಅಶ್ವಿನಿ, ಅತಿಥಿ ಉಪನ್ಯಾಸಕರಾದ ಡಾ.ಕೆ. ಎಸ್.ಕುಮಾರಸ್ವಾಮಿ, ಎ.ವಿ.ರಶ್ಮಿ ಅವರು ಉಪಸ್ಥಿತರಿದ್ದರು.

## ಹೆಚ್‌ಡಿಕೆ ಜಿಲ್ಲೆಗೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ತಂದಿಲ್ಲ: ಸಿ.ಡಿ.ಗಂಗಾಧರ್

**ಮಂಡ್ಯ:** ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಸರಕಾದ ಅನುದಾನದ ಬಗ್ಗೆ ಲೇವಡಿ ಮಾಡಿದ್ದಾರೆ. 2018ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲೆಗೆ ನೀಡಿದ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿ ಜನತೆಯ ಮುಂದಿಡುವಂತೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರವು ಜಿಲ್ಲೆಯ ಸಚಿವರು ಹಾಗೂ ಶಾಸಕರುಗಳ ಮೂಲಕ 10 ಸಾವಿರ ಕೋಟಿ ರೂ ಅಭಿವೃದ್ಧಿ ಕಾರ್ಯಗಳನ್ನು ತಂದಿದ್ದಾರೆ ಎಂದರು. .

ಅವರು ಜಿಲ್ಲೆಯ ಸಂಸದರಾಗಿ, ಕೇಂದ್ರದಲ್ಲಿ ಸಚಿವರಾಗಿ ಪ್ರದೇಶಾಭಿವೃದ್ಧಿ ಅನುದಾನ ಹೊರತು ಪಡಿಸಿ ಇಲ್ಲಿವರೆಗೂ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ತಂದಿಲ್ಲ. ಅದನ್ನು ಬಿಟ್ಟು ಪದೇ ಪದೇ 8 ಸಾವಿರ ಕೋಟಿ ಬಗ್ಗೆ ಮಾತನಾಡಿ ಜನತೆಗೆ ದ್ರೋಹ ಬಗೆಯುತ್ತಿದ್ದಾರೆ ಎಂದು ದೂರಿದರು.

ಇತ್ತೀಚೆಗೆ ಕೆ.ಆರ್.ಪೇಟೆಗೆ ಆಗಮಿಸಿದ ನಿಖಿಲ್‌ಕುಮಾರಸ್ವಾಮಿ ಸಚಿವ ಚಲುವರಾಯಸ್ವಾಮಿ ಅವರನ್ನು ಮಿಸ್ಟರ್ ಎಂದು ಕರೆದಿದ್ದಾರೆ. ಹಿರಿಯನ್ನು ಗೌರವಿಸು ಸಂಸ್ಕೃತಿ ಇದೆಯೇ ಎಂದು ಪ್ರಶ್ನಿಸಿದರು. ಪ್ರತಿಯಾಗಿ ಕಾಂಗ್ರೆಸ್ ಸಚಿವರು ಮಾಜಿ ಸಿಎಂ ಆಗಿದ್ದ ಹೆಚ್ಡಿಕೆ ಅವರನ್ನು ಕರಿಯ ಎಂದದ್ದು ಹಾಗೂ ಎಲ್.ಆರ್.ಶಿವರಾಮೇಗೌಡ ಅವರ ಇತ್ತೀಚೆಗೆ ಆಡಿಯೋ ವೈರಲ್ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಕ್ಕೆ ಈ ಸಂಬಂಧ ಕೆಪಿಸಿಸಿಗೆ ಪತ್ರ ಬರೆದಿರುವುದಾಗಿ ಹೇಳಿ ಜಾರಿಕೊಂಡರು.

ಮೈಷುಗರ್‌ಗೆ ಸಂಬಂಧಿಸಿದಂತೆ ತನಿಖಾ ತಂಡದಿಂದ ಯಾವುದೇ ಲೋಪವಾಗಿಲ್ಲ ಎಂದು ಹೇಳಿದ್ದು, ಎಲ್ಲ ವ್ಯವಹಾರಗಳು ಪಾರದರ್ಶಕವಾಗಿದೆ ಮುಂದಿನ ಹಂಗಾಮಿಗೆ ಯಶಸ್ವಿಯಾಗಿ ಕಬ್ಬು ನುರಿಯಲಾಗುವುದು. ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ 10 ಸಾವಿರ ಕೋಟಿ ಅನುದಾನ ತಂದಿರುವುದರ ಸಂಬಂಧ ಒಂದು ವಾರದೊಳಗೆ ಕ್ಷೇತ್ರವಾರು ಪಟ್ಟಿ ಬಿಡುಗಡೆ ಮಾಡುವುದಾಗಿ ಪತ್ರಕರ್ತರ ಪ್ರಶ್ನೆಗೆ ಉತ್ತರ ನಿಡಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಚಿನಕುರಳಿ ರಮೇಶ್, ರಾಮಕೃಷ್ಣ, ಮಹದೇವು, ವಿಜಯ್‌ಕುಮಾರ್, ಸಿ.ಎಂ.ದ್ಯಾವಪ್ಪ ಇತರರಿದ್ದರು.




## ಕನ್ನಡಿಗರನ್ನು ಕುಣಿಸಿದ ದ.ರಾ.ಬೇಂದ್ರೆ

### ಪದಗಳ ಗಾರುಡಿಗ, ವರಕವಿ ಬೇಂದ್ರೆ ಅಜ್ಜನ ಒಂದು ನೆನಪು

ಕನ್ನಡ ಸಾಹಿತ್ಯದಲ್ಲಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ.ಬೇಂದ್ರೆ) ಯವರು ಕನ್ನಡದ ಜನಮಾನಸದಲ್ಲಿ ಹಾಡಾಗಿ ಹರಿದು ಆಳವಾಗಿ ಜನಮನವನ್ನು ತಲುಪಿದ್ದಾರೆ . ಭಾವಗೀತೆಗಳ ರೂಪದಲ್ಲೂ, ಚಲನಚಿತ್ರ ಗೀತಗಳ ರೂಪದಲ್ಲೂ ಬೇಂದ್ರೆಯ ಸಾಲುಗಳು ಸಂಗೀತದ ಮೂಲಕ ಜನಜೀವನದ ಭಾಗವಾಗಿವೆ . ಬೇಂದ್ರೆಯವರ ಗೀತೆಗಳು ಜನಪ್ರಿಯವಾಗಲು ಗಾಯಕರು, ಚಿತ್ರನಿರ್ದೇಶಕರು ಹಾಗೂ ಸುಗಮ ಸಂಗೀತದ ಕಲಾವಿದರು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದು.

**ಭಾವಗೀತೆಗಳಾಗಿ ಅರಳಿದ ಬೇಂದ್ರೆಯ ಕಾವ್ಯ:** ಬೇಂದ್ರೆಯ ಕವಿತೆಗಳಲ್ಲಿರುವ ಸಹಜ ಲಯ, ಶಬ್ದಸೌಂದರ್ಯ ಮತ್ತು ಆಂತರಿಕ ಭಾವವು ಅವುಗಳನ್ನು ಭಾವಗೀತೆಗಳಾಗಿ ರೂಪಿಸಲು ಸಹಜ ನೆಲೆಯನ್ನು ಒದಗಿಸಿತು.


ಬೇಂದ್ರೆಯವರ ಕವಿತೆಗಳು ಹಾಡಾಗುವಾಗ, ಅವು ಸಾಹಿತ್ಯದಿಂದ ಸಂಗೀತಕ್ಕೆ ಸರಳವಾಗಿ ಸಾಗಿದವು. ಸಂಗೀತ ನಿರ್ದೇಶಕರು ಕವಿತೆಯ ಅರ್ಥಕ್ಕೆ ಧಕ್ಕೆ ಬರದಂತೆ, ಅದರ ಭಾವವನ್ನೇ ಸ್ವರಗಳ ಮೂಲಕ ವಿಸ್ತರಿಸಿದರು. ಪರಿಣಾಮವಾಗಿ ಈ ಹಾಡುಗಳು ಕಲಾತ್ಮಕ ವಲಯದ ಹೊರತಾಗಿಯೂ ಸಾಮಾನ್ಯ ಜನರ ಮನೆಮಾತಾದವು.

ಬೇಂದ್ರೆಯ ಕವಿತೆಯನ್ನು ಹಾಡಾಗಿ ರೂಪಿಸುವಲ್ಲಿ ಸಂಗೀತ ನಿರ್ದೇಶಕರು ಸಂಗೀತವು ಕವಿತೆಯನ್ನು ಮರೆಮಾಡದೆ, ಅದರೊಳಗೆ ಬೆರೆತು ಕೆಲಸ ಮಾಡಿದರು. ಗಾಯಕರು ಕೂಡ ಪದಗಳ ಉಚ್ಚಾರಣೆ, ವಿರಾಮ, ಭಾವದ ಏರಿಳಿತ ಎಲ್ಲವನ್ನು ಗಮನಿಸಿ ಹಾಡಿದರು. ಅವರ ಧ್ವನಿಯಲ್ಲಿ ಕವಿತೆಯ ಅರ್ಥವೇ ಮುಂಚೂಣಿಯಲ್ಲಿ ನಿಂತಿತು. ಇದರಿಂದ ಬೇಂದ್ರೆಯ ಸಾಲುಗಳು ಸಾಹಿತ್ಯ ಸ್ವಾದಕ್ಕೂ, ಸಂಗೀತ ಸ್ವಾದಕ್ಕೂ ಸಮಾನವಾಗಿ ತೆರೆದವು.

**ಚಲನಚಿತ್ರಗಳಲ್ಲಿ ಬೇಂದ್ರೆ: ಪುಟ್ಟಣ್ಣ ಕಣಗಾಲ್ ಅವರ ಸಂವೇದನಾಶೀಲ ಬಳಕೆ:** ಕನ್ನಡ ಚಲನಚಿತ್ರರಂಗದಲ್ಲಿ ಬೇಂದ್ರೆಯ ಕಾವ್ಯವನ್ನು ಅತ್ಯಂತ ಅರ್ಥಪೂರ್ಣವಾಗಿ ಬಳಸಿದ ನಿರ್ದೇಶಕರಲ್ಲಿ ಪುಟ್ಟಣ್ಣ ಕಣಗಾಲ್ ಪ್ರಮುಖರು. ಅವರ ಚಿತ್ರಗಳಲ್ಲಿ ಹಾಡುಗಳು ಕೇವಲ ಮನರಂಜನೆಯಾಗಿರಲಿಲ್ಲ; ಅವು ಕಥೆಯ ಭಾವನಾತ್ಮಕ ದಿಕ್ಕನ್ನು ನಿರ್ಧರಿಸುತ್ತಿದ್ದವು.

ಪುತ್ತಣ್ಣ ಕಣಗಾಲ್ ಬೇಂದ್ರೆಯ ಸಾಲುಗಳನ್ನು ಆಯ್ಕೆಮಾಡುವಾಗ ಪಾತ್ರಗಳ ಮನಸ್ಥಿತಿ, ಕಥೆಯ ಸಂವೇದನೆ ಮತ್ತು ಸಂದರ್ಭದ ಗಂಭೀರತೆಯನ್ನು ಗಮನಿಸಿದರು. ಪರಿಣಾಮವಾಗಿ ಆ ಹಾಡುಗಳು ಚಿತ್ರ ಮುಗಿದ ನಂತರವೂ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುತ್ತಿದ್ದವು. ಬೇಂದ್ರೆಯ ಕವಿತೆಯ ಮಾನವೀಯತೆ ಮತ್ತು ಪುತ್ತಣ್ಣ ಕಣಗಾಲ್ ಅವರ ದೃಶ್ಯಕಲ್ಪನೆ?ಈ ಎರಡು ಸೇರಿದಾಗ ಕನ್ನಡ ಚಿತ್ರಗೀತೆಗಳು ಅಪರೂಪದ ಘನತೆಯನ್ನು ಪಡೆದವು.

ಪುಟ್ಟಣ್ಣನವರ ಬೆಳ್ಳಿ ಮೋಡ ಚಿತ್ರದ ? ಮೂಡಲ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ದ, ನುಣ್ಣನೆ ಎರಕಾವ ಹೊಯ್ದ? ಅವರ ಪ್ರಸಿದ್ಧ ಭಾವಗೀತೆ. ಮೂಡಲ ದಿಕ್ಕಿನಲ್ಲಿ ಸೂರ್ಯೋದಯವಾಗುವಾಗ ಜಗತ್ತಿನ ಮೇಲೆ ಮುತ್ತಿನಂತಹ ಬೆಳಕಿನ ಎರಕ ಹೊಯ್ದಂತಿದೆ, ಈ ಬೆಳಕು ಜಗತ್ತನ್ನೆಲ್ಲಾ ತೇವಗೊಳಿಸಿ, ಅಮೃತದ ಬಿಂದುಗಳಂತೆ ಹರಡಿ, ಪಕ್ಷಿಗಳ ಹಾಡಿನೊಂದಿಗೆ ಕಾಡನ್ನು ಗಂಧರ್ವ ಸೀಮೆಯನ್ನಾಗಿ ಮಾಡುತ್ತದೆ ಎಂದು ಈ ಕವನ ಬೆಳಗಿನ ಸೌಂದರ್ಯವನ್ನು ವರ್ಣಿಸುತ್ತದೆ. ವಿಜಯ ಭಾಸ್ಕರ್ ಅವರ ಸಂಗೀತದಲ್ಲಿ ಎಸ್. ಜಾನಕಿ ಅವರು ಹಾಡಿರುವ ಗೀತೆ . 1967 ರಲ್ಲಿ ಬಿಡುಗಡೆಯಾದ ಈ ಗೀತೆ ಇಂದಿಗೂ 60 ವರ್ಷಗಳ ನಂತರವೂ ಜನಪ್ರಿಯವಾಗಿದೆ . ಪುಟ್ಟಣ್ಣನವರ ಇನ್ನೊಂದು ಶ್ರೇಷ್ಠ ಚಿತ್ರ ಶರಪಂಜರ . ಅದರ ಅತ್ಯಂತ ಜನಪ್ರಿಯ ಗೀತೆ ?ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ ಚುಂಬಕ ಗಾಳಿಯು ಬೀಸುತಿದೆ? ಸೂರ್ಯನ ಬಿಂಬಕೆ ಚಂದ್ರನ ಬಿಂಬವೂ ರಮಿಸಿ ನಗೆಯಲಿ ಮೀಸುತಿದೆ?. ) ಎಂಬ ಬೇಂದ್ರೆ ಅವರು ರಚಿಸಿದ ಅತ್ಯಂತ ಪ್ರಸಿದ್ಧ ಕವಿತೆ. ಈ ಸಾಲುಗಳು ಚುಂಬಕ ಗಾಳಿಯ ಹರಿವು ಮತ್ತು ಸೂರ್ಯ-ಚಂದ್ರರ ಮಿಲನವನ್ನು ವರ್ಣಿಸುವ, ಬೇಂದ್ರೆಯವರ ಕಾವ್ಯಪ್ರೇಮ ಮತ್ತು ದಾರ್ಶನಿಕತೆಯನ್ನು ಎತ್ತಿಹಿಡಿಯುವ ಪ್ರೇಮಗೀತೆಯಾಗಿದೆ. ಈ ಗೀತೆಯು ಪ್ರಕೃತಿಯಲ್ಲಿನ ಮಿಲನ, ಕಾಂತೀಯತೆ ಮತ್ತು ಪ್ರೇಮದ ಸಂಕೇತಗಳನ್ನು ವರ್ಣಿಸುತ್ತದೆ.



ಈ ಗೀತೆಯನ್ನು ಪುಟ್ಟಣ್ಣವರು ಚಿತ್ರದಲ್ಲಿ ಉಪಯೋಗಿರುವ ರೀತಿ , ವಿಜಯಭಾಸ್ಕರ್ ಅವರ ಅದ್ಬುತ ಗೀತೆ ಸಂಯೋಜನೆ, ಪಿ ಬಿ ಶ್ರೀನಿವಾಸ್ ಮತ್ತು ಎಸ್ ಜಾನಕಿಯವರ ಅದ್ಭುತ ಗಾಯನ ಈ ಗೀತೆಯನ್ನು ಶ್ರೀಮಂತಗೊಳಿಸಿದೆ .

**ಪ್ರತಿ ಯುಗಾದಿ ಹಬ್ಬದಲ್ಲೂ ತಪ್ಪದೇ ಪ್ರಸಾರವಾಗುವ**
**ಯುಗ ಯುಗಾದಿ ಕಳೆದರೂ, ಯುಗಾದಿ ಮರಳಿ ಬರುತಿದೆ**
**।**
**ಹೊಸ ವರುಷಕೆ ಹೊಸ ಹರುಷವ, ಹೊಸತು ಹೊಸತು ತರುತಿದೆ ॥**

ಹಾಡು ಬೇಂದ್ರೆಯವರ ಮತ್ತೊಂದು ಜನಪ್ರಿಯ ಗೀತೆ . 1963ರ 'ಕುಲವಧು' ಚಲನಚಿತ್ರದ ಜನಪ್ರಿಯ ಗೀತೆಯಾಗಿದ್ದು, ಇದನ್ನು ಎಸ್. ಜಾನಕಿ ಹಾಡಿದ್ದಾರೆ. ಈ ಹಾಡಿಗೆ ಜಿ.ಕೆ. ವೆಂಕಟೇಶ್ ಸಂಗೀತ ನೀಡಿದ್ದು, ಹೊಸ ವರ್ಷದ ಸಂಭ್ರಮ, ಪ್ರಕೃತಿಯ ಬದಲಾವಣೆ ಮತ್ತು ಜೀವನದ ನವೀಕರಣವನ್ನು ಈ ಗೀತೆ ಸುಂದರವಾಗಿ ವರ್ಣಿಸುತ್ತದೆ.

**ಇಳಿದು ಬಾ ತಾಯಿ ಇಳಿದು ಬಾ ॥**
**ಹರನ ಜಡೆಯಿಂದ ಹರಿಯ ಅಡಿಯಿಂದ ಋಷಿಯ ತೊಡೆಯಿಂದ ನುಸುಳಿ ಬಾ**
**ದೇವದೇವರನು ತಣಿಸಿ ಬಾ ದಿಗ್ ದಿಗಂತದಲಿ ಹನಿಸಿ ಬಾ**
**ಚರಾಚರಗಳಿಗೆ ಉಣಿಸಿ ಬಾ, ಇಳಿದು ಬಾ ತಾಯಿ ಇಳಿದು ಬಾ**

ಇದು ಬೇಂದ್ರೆಯವರ ಮತ್ತೊಂದು ಅದ್ಭುತ ಗೀತೆ. ಇದನ್ನು ಅರಿಶಿನ ಕುಂಕುಮ ಚಿತ್ರಕ್ಕಾಗಿ ಪಿ ಬಿ ಶ್ರೀನಿವಾಸ್ ಅವರು ಹಾಡಿದ್ದಾರೆ . ಇದು ಇಂದಿಗೂ ಮೈನಿವಿರೇಳಿಸುವ ಅದ್ಭುತ ಗೀತೆ .

**ಸುಗಮ ಸಂಗೀತದಲ್ಲಿ ಬೇಂದ್ರೆ: ಜನಮನದ ಸಂಗಾತಿ**
ಸುಗಮ ಸಂಗೀತ ಕ್ಷೇತ್ರದಲಲ್ಲಿ ಬೇಂದ್ರೆಯವರ ಭಾವಗೀತೆಗಳು ವಿಶೇಷ ಸ್ಥಾನ ಪಡೆದಿವೆ. ವೇದಿಕೆಗಳಲ್ಲಿ, ರೇಡಿಯೋ ಕಾರ್ಯಕ್ರಮಗಳಲ್ಲಿ, ಸಂಗೀತೋತ್ಸವಗಳಲ್ಲಿ ಅವರ ಕವಿತೆಗಳು ನಿರಂತರವಾಗಿ ಹಾಡಲ್ಪಡುತ್ತವೆ .

ಸುಗಮ ಸಂಗೀತವು ಬೇಂದ್ರೆಯನ್ನು ?ಪುಸ್ತಕದ ಕವಿ?ಯಿಂದ ?ಜನರ ಕವಿ?ಯಾಗಿ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿತು. ಕವಿತೆಯ ಗಂಭೀರತೆಯನ್ನು ಕಳೆದುಕೊಳ್ಳದೆ, ಅದನ್ನು ಕೇಳುವವರಿಗೆ ಹತ್ತಿರವಾಗಿಸಿರುವುದು ಸುಗಮ ಸಂಗೀತದ ದೊಡ್ಡ ಸಾಧನೆ.

ಕವಿತೆಯನ್ನು ಜನರ ಹಾಡು ಮಾಡಿದ ಕಲಾವಿದರು ಬೇಂದ್ರೆಯವರ ಕವನಗಳನ್ನು ಜನಪ್ರಿಯಗೊಳಿಸುವಲ್ಲಿ ಕೆಲವು ಕಲಾವಿದರು ವಿಶೇಷವಾಗಿ ಸ್ಮರಣೀಯರು.

ಪಿ. ಕಾಳಿಂಗ ರಾವ್ : ಅವರ ಧ್ವನಿಯಲ್ಲಿ ಬೇಂದ್ರೆಯ ಕವಿತೆಗಳು ಸರಳತೆ ಮತ್ತು ಗಂಭೀರತೆಯ ಸಮತೋಲನ ಪಡೆದವು. ಅವರು ಹಾಡಿದ ಭಾವಗೀತೆಗಳು ಕಾವ್ಯವನ್ನು ಜನಸಾಮಾನ್ಯರ ಬದುಕಿಗೆ ತಂದು ನಿಲ್ಲಿಸಿವೆ. ಇಳಿದು ಬಾ ತಾಯಿ ಇಳಿದು ಬಾ ಗೀತೆಯನ್ನು ಅತ್ಯಂತ ಜನಪ್ರಿಯಗೊಳಿಸಿದವರು ಕಾಳಿಂಗರಾಯರು .

ಮೈಸೂರು ಅನಂತಸ್ವಾಮಿ : ಅನಂತಸ್ವಾಮಿ ಬೇಂದ್ರೆಯ ಸಾಲುಗಳಿಗೆ ಜನಪದೀಯ ಸ್ಪರ್ಶ ನೀಡಿದರು. ಅವರ ಗಾಯನದಲ್ಲಿ ಕವಿತೆ, ಗ್ರಾಮೀಣ ಬದುಕಿನ ಭಾಗವಾಗಿ ಕಾಣಿಸಿಕೊಂಡಿತು. ಇದು ಬೇಂದ್ರೆಯ ಕಾವ್ಯಕ್ಕೆ ಹೊಸ ಆಯಾಮ ನೀಡಿತು. ಅವರು ಬೇಂದ್ರೆಯವರ ನಾಕು ತಂತಿಯನ್ನು ಅತ್ಯಂತ ಜನಪ್ರಿಯಗೊಳಿಸಿದರು .

ಸಿ. ಅಶ್ವತ್ಥ್. : ಸುಗಮ ಸಂಗೀತವನ್ನು ಅತ್ಯಂತ ಉನ್ನತ ಮಟ್ಟಕ್ಕ ತಂದವರಲ್ಲಿ ಅಶ್ವತ್ಥ್ ಪ್ರಮುಖರು. ಬೇಂದ್ರೆಯವರ ಕವಿತೆಗಳನ್ನು ಅವರು ಶ್ರೋತೃಗಳಿಗೆ ತಲುಪಿಸುವಲ್ಲಿ ಯಶಸ್ವಿಯಾದರು.

ಬೇಂದ್ರೆಯವರ ? ಬಂಗಾರ ನೀರ? ?ನೀ ಹಿಂಗೆ ನೋಡಬ್ಯಾಡ ನನ್ನ ? ಕುರುಡು ಕಾಂಚಾಣ ? ಶ್ರಾವಣ ಬಂತು ಕಾಡಿಗೆ ? ಈ ಹಾಡನ್ನು ಅಶ್ವಥ್ ಅವರ ಧ್ವನಿಯಲ್ಲೇ ಕೇಳಬೇಕು . ಬೇಂದ್ರೆಯವರು ಸ್ವರಗಳಲ್ಲಿ ಹಾಡನ್ನು ಕುಣಿಸಿದರೆ , ಅಶ್ವಥ್ ಅವರು ಹಾಡಿನಲ್ಲಿ ಕೇಳುಗರನ್ನು ಹುಚ್ಚೆದ್ದು ಕುಣಿಯುವಂತೆ ಮಾಡುತ್ತಾರೆ .

**ಸಂಗೀತ ಕಟ್ಟಿ :** ಇವರು ಬೇಂದ್ರೆಯವರ ?ಘಮ ಘಮ ಘಮಾಡಿಸ್ತಾವೆ ಮಲ್ಲಿಗೆ ?, ?ಮುಗಿಲ ಮಾರಿಗೆ ರಾಗ ರತಿಯ ಹಾಡ ಹಾಡಿದರೆಂದರೆ ? ಬೇಂದ್ರೆ ಅಜ್ಜ ಸಹ ಕುಣಿಯುತ್ತಾರೆ . ದ.ರಾ.ಬೇಂದ್ರೆಯ ಕವಿತೆಗಳು ಸಂಗೀತದ ಸ್ಪರ್ಶದಿಂದ ಹೊಸ ಜೀವ ಪಡೆದವು. ಭಾವಗೀತೆಗಳಾಗಿ, ಚಲನಚಿತ್ರ ಗೀತಗಳಾಗಿ, ಸುಗಮ ಸಂಗೀತದ ವೇದಿಕೆಗಳಲ್ಲಿ ಅವು ನಿರಂತರವಾಗಿ ಪುನರ್ಜನ್ಮ ಪಡೆದಿವೆ.

ಇದು ಕೇವಲ ಕವಿಯ ಸಾಧನೆಯಲ್ಲ; ಸಂಗೀತ ನಿರ್ದೇಶಕರು, ಗಾಯಕರು, ನಿರ್ದೇಶಕರು ಮತ್ತು ಕಲಾವಿದರು ಸೇರಿ ರೂಪಿಸಿದ ಸಾಂಸ್ಕೃತಿಕ ಪರಂಪರೆ. ಬೇಂದ್ರೆಯ ಸಾಲುಗಳು ಹಾಡಾಗಿರುವ ತನಕ, ಅವು ಕನ್ನಡ ಮನಸ್ಸಿನಲ್ಲಿ ಜೀವಂತವಾಗಿಯೇ ಇರುತ್ತವೆ.



। **ರಚನೆ : ಸ್ವಾಮಿನಾಥನ್**
ಮೊಬೈಲ್ : 9880041516
Email : Swamynathann@gmail.com

## ಸಂಕ್ಷಿಪ್ತ ಸುದ್ದಿ

### ಫೆ.01 ರಂದು ಕುಡಿಯಡ ಸಾಂಸ್ಕೃತಿಕ ನಮ್ಮೆ

**ಮಡಿಕೇರಿ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕಕ್ಕಬ್ಬೆ ನಾಲ್‌ನಾಡ್ ಪೂಮಲೆ ಕುಡಿಯ ಸಾಂಸ್ಕೃತಿಕ ಸಮಿತಿ ಇವರ ವತಿಯಿಂದ ಕುಡಿಯಡ ಸಾಂಸ್ಕೃತಿಕ ನಮ್ಮೆ-2026 ಕಾರ್ಯಕ್ರಮವು ಫೆಬ್ರವರಿ, 01 ರಂದು ಬೆಳಗ್ಗೆ 10 ಗಂಟೆಗೆ ಯವಕಪಾಡಿ ಸಮುದಾಯ ಭವನದಲ್ಲಿ ನಡೆಯಲಿದೆ.

ಯವಕಪಾಡಿ ಗ್ರಾಮದ ಹಿರಿಯರಾದ ಕುಯಿನಾಲಮಲೆ ಸೀತಮ್ಮ ಕರುಂಬಯ್ಯ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ, ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಇತರರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ವಿಚಾರಗೋಷ್ಠಿ ಹಾಗೂ ಕವಿಗೋಷ್ಠಿ ನಡೆಯಲಿದೆ.

### ಗ್ರಾ.ಪಂ.ಪುನರ್ ರಚನೆ; ಕರಡು ಅಧಿಸೂಚನೆ ಪ್ರಕಟ

**ಮಡಿಕೇರಿ:** ವಿರಾಜಪೇಟೆ, ಪೊನ್ನಂಪೇಟೆ ಹಾಗೂ ಕುಶಾಲನಗರ ತಾಲ್ಲೂಕಿನ ಕೆಲವು ಗ್ರಾಮ ಪಂಚಾಯಿತಿಗಳನ್ನು ಪುನರ್ ರಚಿಸಲು ಕರಡು ಅಧಿಸೂಚನೆ ಪ್ರಕಟಿಸಿ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಆದೇಶ ಹೊರಡಿಸಿದ್ದಾರೆ.

ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವವರು ಫೆಬ್ರವರಿ, 6 ರೊಳಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಿದ್ದಾರೆ.

ಪುನರ್ ರಚನೆ ಗ್ರಾಮಗಳು: ವಿರಾಜಪೇಟೆ ತಾಲ್ಲೂಕಿನ ಚೆಂಬೆಬೆಳ್ಳೂರು ಗ್ರಾ.ಪಂ.ವ್ಯಾಪ್ತಿಯ ಚೆಂಬೆಬೆಳ್ಳೂರು, ಕುಕ್ಲೂರು, ದೇವಣಗೇರಿ, ಐಮಂಗಲ, ಮಗ್ಗುಲ, ಬಿಟ್ಟಂಗಾಲ ಗ್ರಾಮದ ಬಿಟ್ಟಂಗಾಲ, ಬಾಳುಗೋಡು, ನಾಂಗಾಲ, 1ನೇ ರುದ್ರಗುಪ್ಪೆ, ವಿ.ಬಾಡಗ, ಬೇಟೋಳಿ ಗ್ರಾ.ಪಂ.ನ ಬೇಟೋಳಿ, ಹೆಗ್ಗಳ, ಆರ್ಜಿ ಗ್ರಾಮ ಪಂಚಾಯಿತಿಯ ಆರ್ಜಿ, ಕೆದಮುಳ್ಳೂರು ಗ್ರಾ.ಪಂ.ನ ಕೆದಮುಳ್ಳೂರು, ಕೊಟ್ಟೋಳಿ, ಪಾಲಂಗಾಲ, ಕದನೂರು ಗ್ರಾ.ಪಂ.ನ ಕದನೂರು, ಅರಮೇರಿ ಹಾಗೂ ಮೈತಾಡಿ ಗ್ರಾಮಗಳನ್ನು ಆಯಾಯ ಪಂಚಾಯಿತಿ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಪೊನ್ನಂಪೇಟೆ ತಾಲ್ಲೂಕಿನ ಹಾತೂರು ಗ್ರಾಮದ ಹಾತೂರು, ಕೈಕೇರಿ, ಕುಂದ, ಬಲ್ಯಮಂಡೂರು ಗ್ರಾ.ಪಂ.ನ ಬಲ್ಯಮಂಡೂರು, ಚಿಕ್ಕಮಂಡೂರು, ಕುಶಾಲನಗರ ತಾಲ್ಲೂಕಿನ ಗುಡ್ಡೆಹೊಸೂರು ಗ್ರಾ.ಪಂ.ನ ಬಸವನಹಳ್ಳಿ, ರಸಲ್‌ಪುರ, ಅತ್ತೂರು ಅರಣ್ಯ, ಆನೆಕಾಡು ಅರಣ್ಯ, ಬೈಚನಹಳ್ಳಿಯಲ್ಲಿ ಆಯಾಯ ಪಂಚಾಯಿತಿ ವ್ಯಾಪ್ತಿಗೆ ಒಳಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕರಡು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

### ಅರ್ಜಿ ಸಲ್ಲಿಸಲು ಕಾಲಾವಕಾಶ

**ಮಡಿಕೇರಿ:** ಪ್ರಸಕ್ತ (2025-26) ಸಾಲಿಗೆ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ಅಲೆಮಾರಿ/ ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ವಿದ್ಯಾರ್ಥಿ ವೇತನ, ವಿದ್ಯಾಸಿರಿ, ಊಟ ಮತ್ತು ವಸತಿ ಸಹಾಯ ಹಾಗೂ ಶುಲ್ಕ ವಿನಾಯಿತಿ ಸೌಲಭ್ಯಕ್ಕಾಗಿ" ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಫೆಬ್ರವರಿ, 15 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ದೀಪಕ್ ಅವರು ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ: https://ssp.postmatric.karnataka.gov.in/ ಕಾರ್ಯಕ್ರಮಗಳ ವಿವರ, ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ಕಾರ್ಯಕ್ರಮಗಳ ಸರ್ಕಾರಿ ಆದೇಶಗಳಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು. ಇಲಾಖಾ ಸಹಾಯವಾಣಿ ಸಂಖ್ಯೆ:8050770004. ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಸಹಾಯವಾಣಿ ಇ-ಮೇಲ್: postmatrichelp@karnataka.gov.in ದೂರವಾಣಿ ಸಂಖ್ಯೆ: 08272-295628 ನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ತಿಳಿಸಿದ್ದಾರೆ.


### ಫೆ.01 ರಂದು ಸಾಮೂಹಿಕ ಸತ್ಯನಾರಾಯಣ ಪೂಜೆ

**ಮಡಿಕೇರಿ:** ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಫೆಬ್ರವರಿ, 01 ರಂದು ಸಂಜೆ 4 ಗಂಟೆಯಿಂದ "ಸಾಮೂಹಿಕ ಸತ್ಯನಾರಾಯಣ" ಪೂಜೆ ನಡೆಯಲಿದೆ.


ಸಾರ್ವಜನಿಕ ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ "ಸಾಮೂಹಿಕ ಸತ್ಯನಾರಾಯಣ" ಪೂಜೆಯಲ್ಲಿ ಭಾಗವಹಿಸಿ, "ಸಾಮೂಹಿಕ ಸತ್ಯನಾರಾಯಣ" ಪೂಜೆಯನ್ನು ಯಶಸ್ವಿಗೊಳಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಎನ್.ಜಿ ಅವರು ಕೋರಿದ್ದಾರೆ.

### ಫೆ.01 ರಂದು ಮಡಿವಾಳ ಮಾಚಿದೇವರ ಜಯಂತಿ

**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಫೆಬ್ರವರಿ, 01 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.



# ಎಂಟಾಣೆಯ ಸ್ವರ್ಗ



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನಿಗೆ ನಂಟರು, ಬೀಗರು ಬಂದರೆ ಹೋಗುವಾಗ ಕೈಗೆ 50 ಪೈಸೆ ಇಲ್ಲ ರೂಪಾಯಿ ಇಟ್ಟು ಹೋದರೆ ಸ್ವರ್ಗಕ್ಕೆ ಮೂರೇಗೇಣು.ಶೆಟ್ಟಿಯ ಅಂಗಡಿಗೆ ಹೋಗಿ 5 ಪೈಸೆಗೆ ಮೂರು ನಿಂಬೆ ಹುಳಿ ಪೆಪರ್ಮೆಂಟ, ಅರ್ಕಿನ ಪೆಪರ್ಮೆಂಟ, ಖೋವಾ ಬಿಳಿ ಬರ್ಫಿ, ಕೆಂಪುಬಣ್ಣದ ಸೇಬಿನಾಕಾರದ ಪೆಪರ್ಮೆಂಟ, ಉಲ್ಟಪಲ್ಟಾ ಸೊಂಪು,ರಾಜಕುಮಾರ ಕಂಬರಗಟ್ಟ, ಖಾರಾ ಸೇವು,ಬಿಂಗರಿ ಹಾಗೆ ಆಡಿಸುವ ದಾರದಲ್ಲಿ ಹಾಕಿರುವ ಬಿಳಿಯ ಹತ್ತು ಪೈಸೆ ಆಕಾರದ ಪೆಪರ್ಮೆಂಟ, ಆಡಿ,ಆಡಿ ಸಾಕಾಗಿ ಕೊನೆಗೆ ತಿಂದುಬಿಡುವದು.

ಇದೆಲ್ಲ ಮುಗಿದರೂ ಕೈ ಬೆರಳಿಗೆ ಹಾಕಿ ತಿನ್ನುವ ಕೊಳುವೆ,ಸಂಡಿಗೆಯಂತಹ ಖಾದ್ಯ!! ಕುರುಂ,ಕುರಂ ತಿನ್ನುವ ಯೋಗ!! ಆಹಾ ಎಂತಹ ಮಜಾ!!. ಇದು ಗೆಳೆಯರ ಗುಂಪಿನಲ್ಲಿ ಯಾರ ಹತ್ತಿರವೂ ದುಡ್ಡು ಇದ್ದರೂ ತಿನ್ನಿಸಿ, ತಿನ್ನುವ ಜಾಯಮಾನ.

ಕಾನ್ವೆಂಟ್ ಹಾವಳಿ ಇರದ ಕಾಲ ಅನ್ಯೋನ್ಯತೆಯಿಂದ ಎಲ್ಲಾ ಜಾತಿಯ ಜನರು ಒಂದೇ ಶಾಲೆಗೆ,ಸರಿಕಾರಿ ಪ್ರಾಥಮಿಕ ಶಾಲೆಗೆ ಹೋಗುವ ಸಂಭ್ರಮ. ಊರ ಹುಡುಗರುಎಲ್ಲರೂ

ಸ್ನೇಹಿತರೇ!!

ಪ್ರತಿ ರಾಷ್ಟ್ರೀಯ ಹಬ್ಬಗಳನ್ನೂ , ರಂಗೋಲಿ ಯಿಂದ ಹಿಡಿದು, ಧ್ವಜ ಕಟ್ಟುವದು,ಒಬ್ಬರ ಮನೆಯಿಂದ ಟೇಬಲ್ ಕ್ಲಾಥ,ಒಬ್ಬರ ಮನೆಯಿಂದ ಫ್ಲಾವರಪಾಟ್ ಜೋಡಿಸುವ ಸಂಭ್ರಮ!! ಎಲ್ಲ ಮಕ್ಕಳಾದ ನಮ್ಮದೇ ಕೆಲಸ!!

ಮನದ ಮಾತು...

50ಪೈಸೆಯಲ್ಲಿ ಕಾಣುವ ಆ ಸ್ವರ್ಗ ಸುಖ, ಆ ಸ್ನೇಹ ಎಲ್ಲಿ ಹೋದವು!! ಈಗಿನ ಮಕ್ಕಳ ಕೈಯಲ್ಲಿ, 90,120,300...ರೂಪಾಯಿಯ ಡೈರಿ ಮಿಲ್ಕ್, ಡೈರಿ ಮಿಲ್ಕ್ ಸಿಲ್ಕ್, ಫ್ರುಟ್ಎಂಡನಟ್, ಮಂಚ, ಕಿಟಕ್ಯಾಟ ಎಲ್ಲಕೊಟ್ಟರೂ ಆ ಎಂಟಾಣೆಯ ಸುಖ ಕಂಡೇ ಇಲ್ಲ!!

ಯಾವದೋ ಸಮಾರಂಭಗಳಿಗೂ ಹೋದರೂ ಮಕ್ಕಳಿಗೆ ಯಾವ ಉತ್ಸುಕತೆ ಇರುವದಿಲ್ಲ.ಮಕ್ಕಳು ಮೊಬೈಲಿನಲಿ ಆಟ ಆಡುವದರಲಿ ತುಂಬಾ ಬಿಝಿ.

ಮೊದಲಾದರೆ ಹಿರಿಯರು ಮನೆಯಲ್ಲಿ ಸಂಜೆ ಅಜ್ಜ ಅಜ್ಜಿ ಮಕ್ಕಳನ್ನು ಕೂಡಿಸಿಕೊಂಡು ಮಗ್ಗಿಗಳನ್ನ ಬಾಯಿ ಪಾಠ ಮಾಡಿಸುವುದು ರಾಮಾಯಣ ಮಹಾಭಾರತದ ಕಥೆಗಳನ್ನು ಹೇಳುವುದು ಮುದ್ದು ಮಾಡಿ ಉಣಿಸುವುದು ಇಂಥ ಎಲ್ಲಾ ಅಂತಃಕರಣದ ನಂಟುಗಳು ಅಜ್ಜಿ ಮೊಮ್ಮಕ್ಕರಲ್ಲಿತ್ತು . ಆದರೆ ಇಂದು ಅಜ್ಜ ಅಜ್ಜಿ ಸಂಜೆಯದ ಬರುವ ಧಾರಾವಾಹಿಗಳನ್ನು ನೋಡುವುದರಲ್ಲಿ ಬಿಜಿಯಾಗಿರುತ್ತಾರೆ..ಮೊಮ್ಮಕ್ಕಳು ಮೊಬೈಲ್ ನೋಡುವುದರಲ್ಲಿ ಬ್ಯುಸಿಯಾಗಿರುತ್ತಾರೆ.

ಇನ್ನು ಮಾನಸಿಕ ತಜ್ಞರ ಪ್ರಕಾರ ಇಂದಿನ ಮಕ್ಕಳಲ್ಲಿ ಬಹುವಾಗಿ ಕಂಡುಬರುವುದೆಂದರೆ ಹಠಮಾರಿತನ ಮತ್ತು ಅನ್ಯಮನಸ್ಕತೆ. ಯಾವುದೇ ಮಕ್ಕಳನ್ನು ನೋಡಿ ನೀವು ಆ ಕೆಲಸ 10 ನಿಮಿಷ ಆದ ನಂತರ ಅವರಿಗೆ ಬೇಸರ. ಮದುವೆ ಸಮಾರಂಭಗಳಿಗೆ ಕರೆದರೆ ಅಲ್ಲಿ ಅವರಿಗೆ ಬೇಸರ ಬರುತ್ತದೆ ಬರುವುದಿಲ್ಲ ಎಂದು ನೇರವಾಗಿ ಹೇಳುತ್ತಾರೆ.





ಮೊದಲೆಲ್ಲಾದರೂ ಕರೆದರೆ ಬಸ್ಸಿನಲ್ಲಿ ಗದ್ದಲದಲ್ಲಿಯೇ ನೂಕಿಕೊಂಡು ಊರಿಗೆ ಹೋಗುವ ಒಂದು ಹುಮ್ಮಸ್ಸು ಮಕ್ಕಳಲ್ಲಿ ಇರುತ್ತಿತ್ತು ಆದರೆ ಇಂದಿನ ಮಕ್ಕಳಿಗೆ ಕಾರಿನಲ್ಲಿ ಕರೆದುಕೊಂಡು ಹೋದರು ತಕ್ಷಣ ಅವರಿಗೆ ಸಮಯ ಹೋಗದೆ ಬೇಸರ ಬರುತ್ತದೆ. ಬೇಸಿಗೆ ರಜೆ ಬಂದರೆ ಚಿಕ್ಕಪ್ಪ ದೊಡ್ಡಪ್ಪ ಅಜ್ಜ ಅಜ್ಜಿ ಮನೆಗಳಿಗೆ ಮಕ್ಕಳು ಹೋಗಿ ಠಿಕಾಣಿ ಹೂಡುತ್ತಿದ್ದರು. ಅಜ್ಜಿಯ ಮನೆಯಲ್ಲಿ ಮಕ್ಕಳಿಗಾಗಿ ಪ್ರತ್ಯೇಕ ಕೋಣೆಗಳು ಇರುತ್ತಿರಲಿಲ್ಲ. ಪ್ರತ್ಯೇಕ ಹಾಸಿಗೆಗಳು ಇರುತ್ತಿರಲಿಲ್ಲ ಇರುವ ಒಂದು ದೊಡ್ಡ ಪಡಸಾಲೆಯಲ್ಲಿ ಚಾಪೆ. ಜಮಖಾನೆಗಳನ್ನು ಹಾಸಿಕೊಂಡು ಮಲಗುತ್ತಿದ್ದರು. ಬಂಧು ಬಳಗದ ಮಕ್ಕಳೊಂದಿಗೆ ಒಂದಾಗಿ ಬೆರೆತು ಆಟ ಆಡುತ್ತಿದ್ದರು. ಇವರ ಗಲಾಟೆಗೆ ರೇಗಿ ಹಿರಿಯರು ಬೈದರೂ ಅಷ್ಟಾಗಿ ಮನಸ್ಸಿನಮೇಲೆ ತೆಗೆದುಕೊಳ್ಳುತ್ತಿರಲಿಲ್ಲ. ಇರುವ ಒಂದೇ ಬಚ್ಚಲಿನಲ್ಲಿ ಸರದಿಯಂತೆ ಸ್ನಾನ ನಿತ್ಯ ಕರ್ಮಗಳು ನಡೆಯುತ್ತಿದ್ದವು. ಅಪೇಕ್ಷೆಯ ಮೇರೆಗೆ ಅಡುಗೆಗಳಾಗುತ್ತಿರಲಿಲ್ಲ. ಮಾಡಿದ ಅಡುಗೆ ಉಣ್ಣುವ ಅಪೇಕ್ಷೆ ಇರುತ್ತಿತ್ತು. ಇದು ಮಕ್ಕಳಿಗೆ ಒಂದಿಷ್ಟು ಗಟ್ಟಿತನವನ್ನು ಕಲಿಸಿಕೊಡುತ್ತಿತ್ತು. ಪರಸ್ಪರ ಹೊಂದಾಣಿಕೆ ಸೀಮಿತ ಸೌಕರ್ಯಗಳಲ್ಲಿ ಸುಗಮವಾಗಿ ಬದುಕುವ ಸರಳ ಜೀವನಪಾಠ. ಯಾರು ಬೈದರೂ ಹೆಚ್ಚು ಸ್ಪಂದಿಸದೆ ನಿರುಮ್ಮಳವಾಗಿರುವ ಮಾನಸಿಕ ದೃಢತೆ ಹಾಗೂ ಸಮಭಾವವನ್ನು ಹಂಚಿಕೊಳ್ಳುವ ಒಂದು ಸ್ನೇಹ ಬಾಂಧವ್ಯ. ಈಗ ರಜೆಯಲ್ಲಿ ಯಾರು ಯಾರ ಮನೆಗೆ ಹೋಗುವುದಿಲ್ಲ. ತಮ್ಮ ಮಕ್ಕಳನ್ನು ಕಳಿಸುವುದು ಇಲ್ಲ. ಹೋದರು ಆ ಮಕ್ಕಳು ಅಲ್ಲಿ ಹೊಂದಾಣಿಕೆ ಮಾಡಿಕೊಂಡಿರಲು ಸಾಧ್ಯವೇ!? ಅವರಿಗೆ ಪ್ರತ್ಯೇಕ ಹಾಸಿಗೆ ಬೇಕು, ನೆಲದ ಮೇಲೆ ಮಲಗುವದು ಸಾಧ್ಯವಿಲ್ಲ, ಹೀಗೆ ಹಲವು ರಗಳೆ.

ಅತಿಯಾಗಿ ಪ್ರಾಮುಖ್ಯತೆ ಸಿಗುವುದರಿಂದ ಮನುಷ್ಯ ಜೀವನದ ಮೂಲತತ್ವ ಮರೆತುಬಿಡುತ್ತಾನೆ. ಅಜ್ಜ ಅಜ್ಜಿಯ ಮನೆಯಲ್ಲಿ ಹತ್ತು ಹದಿನೈದು ಮಕ್ಕಳು ಬಂದಿರುತ್ತಿದ್ದರು. ರಜೆಯಲಿ ಅಲ್ಲಿ ಒಗ್ಗಟ್ಟಾಗಿ ಬದುಕುವ ಕಲೆ ಮತ್ತು ಜೀವನದ ಅನುಭವದ ಮಾರ್ಮಿಕ ಆದರ್ಶ ಕಲಿಸಿಕೊಡುತ್ತಿತ್ತು. ಮನೆಗೆಲಸಗಳನ್ನು ಮಾಡುವುದು, ಅಳಿಗುಳಿ ಮನೆ ಚೌಕಾಬಾರಗಳಂತ ಆಟ ಆಡುವುದು. ಜಗಳ ಮಾಡುವುದು ಮತ್ತು ಹೊಂದಾಣಿಕೆ ಆಗುವುದು. ಇವೆಲ್ಲವೂ ಸಮಯದ ಒಂದು ಸದ್ಬಾವನೆಗೆ ಸಲ್ಲುತ್ತಿತ್ತು ಆದರೆ ಇದು ಕೇವಲ ಮಕ್ಕಳ ಸಮಸ್ಯೆಯಲ್ಲ ಹಿರಿಯರು ಕೂಡ ಬದಲಾಗಿರುವರು. ಮಕ್ಕಳಿಗೆ ಏನು ಬೇಕು ಅದನ್ನೆಲ್ಲ ಹೇರಳವಾಗಿ ಕೊಡಿಸುತ್ತಾರೆ ಆದರೆ ಅವರಿಗಾಗಿ ಸಮಯವನ್ನು ಮೀಸಲಾಗಿಡುವುದಿಲ್ಲ.

ನಮ್ಮ ಅಜ್ಜಿಗೆ ನಾವು 15 ಜನ ಮೊಮ್ಮಕ್ಕಳು ತನ್ನ ಬಿಡುವಿಲ್ಲದ ಕೆಲಸದ ಮಧ್ಯೆಯೂ ಅವಳು ಸಮಯ ತೆಗೆದು ನಮ್ಮೊಂದಿಗೆ ಚೌಕಬಾರ ಆಡುತ್ತಿದ್ದಳು ಕಥೆ ಹೇಳುತ್ತಿದ್ದಳು ಹೆಣಿಕೆ ಹೊಲಿಗೆಗಳನ್ನು ಕಲಿಸಲು ಪ್ರಯತ್ನಿಸುತ್ತಿದ್ದಳು . ಆದರೆ ಇಂದಿನ ಮಕ್ಕಳಿಗೆ ಸಮಯವನ್ನು ಬಿಟ್ಟು ಎಲ್ಲವೂ ಹೇರಳವಾಗಿ ಸಿಗುತ್ತದೆ ಮುಖ್ಯವಾಗಿ ಸಿಗಬೇಕಾಗಿದ್ದ ಪ್ರೀತಿ ಮತ್ತು ಜೀವನ ಪಾಠಗಳ ಕೊರತೆ ಇದೆ.

ಇಂದಿನ ಮಕ್ಕಳ ಕೈಯಲ್ಲಿ ಮೊಬೈಲ್ ಇರುವುದರಿಂದ ತಿಳಿಯಬಾರದ ವಯಸ್ಸಿನಲ್ಲಿ ಅತಿಯಾದ ಪ್ರೌಢ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ಇದರಿಂದ ಮಕ್ಕಳನ್ನು ಹೇಗೆ ದೂರ ಇಡಲು ಸಾಧ್ಯ ನಿಮ್ಮ ಮನೆಯಲ್ಲಿರುವ ಮಗುವನ್ನು ನೀವು ನಿಯಂತ್ರಿಸಬಹುದು ಆದರೆ ಅವನ ಸ್ನೇಹಿತರನ್ನು ನಿಯಂತ್ರಿಸಲು ಸಾಧ್ಯವೇ? ತಂದೆ ತಾಯಿ ಮೊಬೈಲ್ ಕೊಡದಿದ್ದರೂ ಸ್ನೇಹಿತರ ಮೊಬೈಲ್ ನಿಂದ ಮಕ್ಕಳು ಹಲವು ವಿಷಯಗಳನ್ನ ತಿಳಿದುಕೊಳ್ಳುತ್ತವೆ. ಅಶ್ಲೀಲ ವಿಡಿಯೋಗಳನ್ನು ನೋಡಿದ ಮಕ್ಕಳ ಬಾಲ ವಯಸ್ಸಿನ ಮೇಲೆ ಮನಸ್ಸಿನ ಮೇಲೆ ಯಾವ ರೀತಿ ಪರಿಣಾಮ ಬೀರಬಹುದು. ಇಂತಹ ವೆಬ್ಸೈಟ್ ಗಳನ್ನು ಸರ್ಕಾರ ಬ್ಯಾನ್ ಮಾಡಿದೆ ಎಂದು ಹೇಳುತ್ತದೆ ಆದರೂ ಅದು ಸುಳ್ಳು!!

ಸಾಕಷ್ಟು ಸ್ನೇಹಿತರು ಮತ್ತು ದೈಹಿಕ ಆಟಗಳ ಕೊರತೆ ಇದ್ದಾಗ ಮಕ್ಕಳ ಏಕಾಂಗಿತನ..ಮನಸ್ಸಿನ ವಿಕೃತಿಯತ್ತ ತಿರುಗುತ್ತದೆ.

ಅದಲ್ಲದೆ ಮಕ್ಕಳು ಆಟ ಆಡಲೆಂದೇ ಇಂತಹ ಆಶ್ಲೀವಾದ ಗೇಮ್ ಗಳನ್ನು ಕೂಡ ರಚಿಸಿರುತ್ತಾರೆ. ಅದರಲ್ಲಿ ತೋರಿಸುವುದು ಬರೀ ಅನೈತಿಕ ಸಂಬಂಧಗಳೆ!. ಶಾಲೆಯ ಮಕ್ಕಳ ನಡುವೆ ಪ್ರೇಮ ಕಾಮ, ಪಾಠ ಹೇಳಿಕೊಡುವ ಗುರುಮಾತೆಯೊಂದಿಗೆ ವಿದ್ಯಾರ್ಥಿಗಳ ಅನೈತಿಕತೆ,ಅಕ್ಕ ಪಕ್ಕದವರೊಡನೆ ಸ್ನೇಹಿತರೊಡನೆ ಮಹಿಳೆಯರ ಅನೈತಿಕ ಸಂಬಂಧ ಇಂಥವುಗಳನ ಕತೆ ಮತ್ತು ಗೇಮ್ ರೂಪದಲಿ ರಾಜಾರೋಷವಾಗಿ ತೋರಿಸುತ್ತಾರೆ. ಆಗ ಮಕ್ಕಳಿಗೆ ಇದೆಲ್ಲವೂ ಸಹಜ ಎನ್ನುವ ಭಾವನೆ ಬರುವುದಿಲ್ಲವೇ? ನೈತಿಕತೆ ಮತ್ತು ಶುದ್ಧ ಚರಿತ್ರೆಯ ಆದರ್ಶವಾದಿ ಸಂಕಲ್ಪಗಳನ್ನು ರೂಪಿಸಿಕೊಳ್ಳುವ ಸಮಯದಲ್ಲಿ ಇಂತಹ ವಿಚಾರಗಳು ಅವರ ತಲೆಯಲ್ಲಿ ತೂರಿಕೊಂಡರೆ ಅವರು ಹೇಗೆ ಸತ್ಪ್ರಜೆಗಳು ಆಗಲು ಸಾಧ್ಯ. ಸರ್ಕಾರಗಳು ಕೂಡ ಈ ನಿಟ್ಟಿನಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಹೀಗೆ ಈಗ ಇರುವ ಸಾಮಾಜಿಕ ಸೌಲಭ್ಯಗಳಲ್ಲಿ ಮಕ್ಕಳನ್ನು ನಿಯಂತ್ರಿಸುವುದು ಸುಲಭವಲ್ಲ ನಿಯಂತ್ರಿಸಬೇಕೆಂಬುದು ಅಧಿಕಾರವಲ್ಲ ಆದರೆ ಮಕ್ಕಳು ತಪ್ಪು ವಿಷಯಗಳಿಂದ ಪ್ರೇರೇಪಿತರಾಗದಂತೆ ತಡೆಯುವುದಂತೂ ಬಹು ಮುಖ್ಯ.

ಇನ್ನು ಮಕ್ಕಳಲ್ಲಿ ವಯಸ್ಸಿಗೂ ಮೀರಿದ ಬುದ್ಧಿವಂತಿಕೆ ಅತಿ ಪ್ರೌಢತನ ತೋರಿಸುವುದು ಮಕ್ಕಳಿಗಾಗಿ ನಡೆಸುವ ರಿಯಾಲಿಟಿ ಶೋಗಳಲ್ಲಿ ದ್ವಂದ ಅರ್ಥಗಳನ್ನು ಬರುವಂತೆ ಮಾತನಾಡಿಸುವುದು ಇದೆಲ್ಲವೂ ಎಷ್ಟು ಸರಿ. ಇದು ಮಕ್ಕಳಿಗೆ ಹೇಗೆ ಮಾರ್ಗದರ್ಶನವಾಗುತ್ತಿದೆ. ಪ್ರೌಢಾವಸ್ಥೆಗೆ ಬರುವ ಮಕ್ಕಳ ಮನಸ್ಸನ್ನು ನಿಯಂತ್ರಿಸಲು ಮತ್ತು ಏಕಾಗ್ರತೆಯನ್ನು ಕೇಂದ್ರೀಕರಿಸಲು ಯೋಗ ಮತ್ತು ಧ್ಯಾನಗಳು ಮುಖ್ಯ ಪಾತ್ರವನ್ನು ವಹಿಸುತ್ತವೆ ಇಂತಹ ತರಗತಿಗಳ ವ್ಯವಸ್ಥೆ ಶಿಕ್ಷಣ ಪದ್ಧತಿಯಲ್ಲಿ ಅಳವಡಿಕೆಯಾಗಬೇಕಲ್ಲವೇ. ಇದರ ಬಗ್ಗೆ ಸರಕಾರದ ಗಮನವಿಲ್ಲ. ಮಕ್ಕಳ ಮನಸ್ಸು ನಾಜೂಕು ಬೈಬಾರದು ಗದರಬಾರದು ಎಂದು ಅತಿಯಾಗಿ ಉತ್ತೇಜಿಸುವ ಆಧುನಿಕ ವಿಚಾರಗಳು ಒಂದೆಡೆಯಾದರೆ, ಇಬ್ಬರೂ ದುಡಿಯುವ ದಂಪತಿಗಳ ಅತಿ ಶ್ರೀಮಂತವರ್ಗದವರು, ಮಕ್ಕಳಕಡೆಗೆ ಗಮನಕೊಡದೇ ಮಿತಿಮೀರಿದ ಸ್ವಾತಂತ್ರ್ಯ ಮತ್ತು ದುಡ್ಡಿನ ಮದದಿಂದ ಮಕ್ಕಳು ಬಾಲ್ಯದಲೇ ದುಶ್ಚಟಕೆ ದಾಸರು.

ಇವು ಮಕ್ಕಳ ಮನಸ್ಸನ್ನು ದುರ್ಬಲವಾಗಿ ಮಾಡುತ್ತವೆ.

ಜೈಪುರದ ಒಂದು ಪ್ರತಿಷ್ಠಿತ ಶಾಲೆಯಲ್ಲಿ 4ನೇ ತರಗತಿಯ 9 ವರ್ಷದ ಬಾಲಕಿ ನಾಲ್ಕನೇ ಮಹಡಿಯಿಂದ ಜಿಗಿದು ಸಾವನ್ನಪ್ಪಿದಳು. ಏಕೆಂದರೆ ಅವಳಿಗೆ ಮಕ್ಕಳು ತುಂಬಾ ಪೀಡಿಸುತ್ತಿದ್ದರು ಅದನ್ನು ಅವಳು ತಂದೆ ತಾಯಿ ಮತ್ತು ಗುರುಗಳ ಗಮನಕ್ಕೆ ತಂದರು ನಿರ್ಲಕ್ಷಿಸಿದ್ದರು. ಸಣ್ಣ ಮಗುವಿಗೆ ಅವರು ಕಾಡಿಸಿದ್ದಕ್ಕಾಗಿ ಸಾಯಬೇಕು ಎನಿಸಿತು ಯಾಕೆ? ನೋವು ತಡೆದುಕೊಳ್ಳುವ ಗಟ್ಟಿತನ ಇಂದಿನ ಮಕ್ಕಳಲ್ಲಿ ಏಕೆ ಕಾಣುತ್ತಿಲ್ಲ. ಸ್ವಲ್ಪ ಅವಮಾನವಾದರೂ ಸಾಯುವ ತುದಿಯವರೆಗೆ ಹೋಗುವಂಥ ಮಾನಸಿಕತೆ ಉಂಟಾಗುವಷ್ಟು ದುರ್ಬಲರಾಗಿದ್ದಾರೆ.

ಆಧುನಿಕತೆ ಪ್ರಗತಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸಬಹುದು ಆದರೆ ಸುಖವನ್ನು ಕೊಡಲಾರವು. ಮನುಷ್ಯ ಸಂಘ ಜೀವಿ. ಮನುಷ್ಯನಿಗೆ ಅರ್ಥ ಮಾಡಿಕೊಳ್ಳುವಂತಹ ಉತ್ತಮ ಸ್ನೇಹಿತರು ಒಡನಾಡಲು ಸಮಭಾವದ ಜನರು ಬೇಕು. ಕೇವಲ ಸೌಲಭ್ಯಗಳಿಂದ ಮಕ್ಕಳನ್ನು ಸುಖವಾಗಿ ಇಡಲು ಸಾಧ್ಯವಿಲ್ಲ. ಉತ್ತಮ ಸ್ನೇಹಿತರು ಬೇಕು . ಮೊಬೈಲ್ ವಿಡಿಯೋ ಗೇಮ್ ಗಳಲ್ಲ.

**ಮತ್ತೊಂದು ಮನದ ಮಾತು ಮತ್ತೆ ಮುಂದಿನ ವಾರ.**

# ಹೆಸರು ಇಲ್ಲದಿದ್ದರೆ ಹೇಗಿರುತ್ತಿತ್ತು...?






ಸ್ನೇಹಾ ಆನಂದ್

ಒಬ್ಬ ವ್ಯಕ್ತಿಗೆ ಹೆಸರೇ ಇಲ್ಲದಿದ್ದರೆ ಏನಾಗುತ್ತಿತ್ತು! ಊಹಿಸಲೂ ಸಾಧ್ಯವಿಲ್ಲ ಅಲ್ಲವೇ! ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಗುರುತಿಸುವುದೇ ಅವರ ಹೆಸರಿನಿಂದ, ಸುಂದರರು ಒಳ್ಳೆಯವರು, ಕೆಟ್ಟವರು, ಸಂಕೋಚದವರು ಹೀಗೆ ಆಯಾ ವ್ಯಕ್ತಿಯ ಸ್ವಭಾವವನ್ನು ಹೇಳುವಾಗ ಅವರ ಹೆಸರು ಹಿಡಿದು ಬಳಸುತ್ತೇವೆ ಹೀಗಾಗಿ ನಮಗಿರುವ ಹೆಸರು ಜೀವನದಲ್ಲಿ ಅತಿ ಮುಖ್ಯ!


ನಮ್ಮ ಸ್ವಂತ ವ್ಯಕ್ತಿತ್ವ ರೂಪಗೊಳ್ಳುವುದೇ ನಮ್ಮ ಹೆಸರಿನಿಂದ! ಮಗು ಹುಟ್ಟಿದಾಗ ತಾಯಿಯ ಹೆಸರಿನಿಂದ ಪರಿಚಿತಗೊಳ್ಳುತ್ತದೆ ಆಸ್ಪತ್ರೆಯಲ್ಲಿ, ಅದರ ಹೆಸರಿಡುವ ತನಕ ನಾವು ಪ್ರೀತಿಯಿಂದ ಪಾಪು,ಚಿನ್ನು , ಪುಟ್ಟಾ,ಬಂಗಾರ ಎಂದು ಯಾವ್ಯಾವುದೋ ನಮ್ಮ ಇಷ್ಟದ ಹೆಸರಿನಿಂದ ಕರೆಯುತ್ತೇವೆ!

ಹೆಸರಿಟ್ಟ ನಂತರ ದಿನಕ್ಕೆ ಒಂದು ಬಾರಿಯಾದರೂ ನಿಕ್ ನೇಮ್ ಬಿಟ್ಟು ಇಟ್ಟ ಹೆಸರಿನಿಂದ ಕರೆಯುತ್ತಾ ಬಂದಾಗ ಮಗು ತನ್ನನ್ನೇ ಅವರು ಕರೆಯುವುದು ಎನ್ನುವುದನ್ನು ಗುರುತಿಸಲು ಪ್ರಾರಂಭಿಸುತ್ತದೆ!

ಹೀಗಾಗಿ ಹೆಸರು ಹಿಡಿದು ಕರೆದ ತಕ್ಷಣ ನಮ್ಮ ಕಡೆಗೆ ತಿರುಗಿ ನಸು ನಗುತ್ತದೆ!

ಹೆಸರುಗಳು ಮೊದಲೆಲ್ಲಾ ಇಟ್ಟದನ್ನೇ ಇಡುತ್ತಿದ್ದರು , ತಮ್ಮ ಹಿರಿಯರ ನೆನಪಿಗೆ ಅವರ ಹೆಸರನ್ನು ಮಕ್ಕಳಿಗೆ ಇಡುವುದು ಕೂಡ ವಾಡಿಕೆಯಲ್ಲಿತ್ತು!

ಆದರೆ ಈಗ ತಂದೆ, ತಾಯಿಯ ಹೆಸರು ಸೇರಿಸಿ ಮಗುವಿನ ಹೆಸರು ಇಡುತಿದ್ದಾರೆ, ಅದರಿಂದ ಒಂದೊಂದು ಬಾರಿ ಅರ್ಥವಿಲ್ಲದ ಹೆಸರು ಅನಿಸುತ್ತದೆ, ಇನ್ನೂ ಯಾರೂ ಇಡದ ಹೆಸರನ್ನು ಇಡಲು ಪ್ರಯತ್ನಿಸಿದಾಗ ಚಿತ್ರ,ವಿಚಿತ್ರ ಹೆಸರುಗಳನ್ನು ಕೇಳಿ ಇದರ ಅರ್ಥವೇನು ಎಂದು ಅವರನ್ನೇ ಕೇಳುತ್ತೇವೆ!




ಅದರೆ ಯಾವ ಹೆಸರಾದರೂ ಸರಿ ಒಂದು ಮಗು ತನ್ನದೇ ಆದ ವ್ಯಕ್ತಿತ್ವವನ್ನು ಗಳಿಸಲು ಹೆಸರು ಬೇಕೇಬೇಕು!

ಅವರ ಹೆಸರಿಗೆ ತಕ್ಕಂತೆ ಅವರ ವ್ಯಕ್ತಿತ್ವ ಇದ್ದರೆ ನಾವು ಹೆಸರಿಗೆ ತಕ್ಕ ಹಾಗೆ ಇದ್ದಾರೆ ಎನ್ನುವ ಮಾತನ್ನು ಕೂಡ ಹೇಳುತ್ತೇವೆ!

ಹೆಸರಿಲ್ಲದ ಜೀವನ ಊಹಿಸಲೂ ಸಾಧ್ಯವಿಲ್ಲ, ಒಂದು ಕಡೆಗೆ ಹೋದಾಗ ನಾವು ನಮ್ಮ ಹೆಸರಿನಿಂದಲೇ ಗುರುತಿಸಿ ಕೊಳ್ಳಲು ಸಾಧ್ಯ!

ಆಧಾರ್ ಕಾರ್ಡ್, ರೇಷನ್ ಕಾರ್ಡ್ ಇವುಗಳು ನಮ್ಮ ಹೆಸರಿನಿಂದ ಇದ್ದಾಗ ನಾವು ಈ ದೇಶದವರು ಎಂದು ಗುರುತಿಸಿಕೊಳ್ಳುವ ಗುರುತಿನ ಚೀಟಿ!

ಯಾರಿಗೂ ಹೆಸರೇ ಇಲ್ಲದಿದ್ದರೆ ಹೇಗಿರುತ್ತಿತ್ತು ಜೀವನ ಎಂದು ಯೋಚಿಸಿದರೆ ವ್ಯಕ್ತಿಯ ವ್ಯಕ್ತಿತ್ವ ಕುಂಠಿತವಾಗುತಿತ್ತು ಎನ್ನುವುದು ಖಂಡಿತ! ಒಬ್ಬ ವ್ಯಕ್ತಿಯ ವೈಯಕ್ತಿಕ ಜೀವನ ನಿಂತಿರುವುದೇ ಆತನ ಹೆಸರಿನಿಂದ!

ನಾವು ನಮ್ಮ ಹೆಸರನ್ನು ಹೇಳಿ ಪರಿಚಯ ಮಾಡಿಕೊಳ್ಳುತ್ತೇವೆ, ಹೆಸರೇ ಇಲ್ಲದಿದ್ದರೆ ಮುಖ ಪರಿಚಯದಿಂದ ಮಾತ್ರ ಮಾತನಾಡಬೇಕಿತ್ತು! ಬೆಳ್ಳಗೆ , ತೆಳ್ಳಗೆ,ಕಪ್ಪಗೆ, ದಪ್ಪನವರು ಹೀಗೆ ಪರಿಚಯಿಸಿಕೊಂಡು ರೆ ನಮ್ಮ ಹಾಗೆ ಬೇಕಾದಷ್ಟು ಜನರು ಇರುತ್ತಾರೆ, ಆಗ ಇವರ ಮಗಳು, ಇವರ ತಂಗಿ ,ಇವರ ನಾದಿನಿ, ಹೀಗೆ ನಾವು ಅವರ ಹೆಸರಿನ ಜೊತೆಗೆ ನಮ್ಮ ಪರಿಚಯದವರ ಹೆಸರೂ ಹೇಳುತ್ತೇವೆ, ಆಗ ಪರಿಚಯಿಸುವುದು ತೀರಾ ಸುಲಭ!

ಯಾರ ಮುಂದೆ ಆದರೂ ಆ ವ್ಯಕ್ತಿಯ ವಿಷಯ ಹೇಳಲು ಹೆಸರೇ ಇಲ್ಲದಿದ್ದರೆ ಮಾತುಕತೆಗಳು , ಹೊಗಳಿಕೆ, ತೆಗಳಿಕೆಗಳು ತೀರಾ ಕಡಿಮೆಯಾಗುತಿದ್ದವು!

ವ್ಯಕ್ತಿ ಯಾವುದಾದರೂ ಸಾಧನೆ ಮಾಡಿದಾಗ ಅವರು ಹೆಸರು ಹಿಡಿದು ಕರೆದು ಗೌರವಿಸಿದರೆ ಹೆಮ್ಮೆಯಿಂದ ತಲೆ ಎತ್ತಿ ನಿಲ್ಲಲು ಹೆಸರೇ ಕಾರಣ! ಹೀಗಾಗಿ ಹೆಸರಿಲ್ಲದ ಜೀವನ ನಮ್ಮದಾಗಿದ್ದರೆ ಹೇಳ ಹೆಸರಿಲ್ಲದಂತೆ ಮೂರಾಬಟ್ಟೆಯಾಗುತಿತ್ತು!

ಹೆಸರು ಇದ್ದರೆ ವ್ಯಕ್ತಿತ್ವ, ಗೌರವ ಎಲ್ಲಾ! ಸಮಾಜದಲ್ಲಿ ಪ್ರಸಿದ್ಧಿಗೆ ಬರುವುದು ಹೆಸರಿನಿಂದಲೇ! ಒಂದು ಸ್ಥಾನಮಾನವನ್ನು ವ್ಯಕ್ತಿ ಗಳಿಸಿದಾಗ ಆ ವ್ಯಕ್ತಿಯ ಪರಿಚಯ ಹೆಸರಿನಿಂದಲೇ!

ಸ್ನೇಹ ಲೋಕ


ಹೀಗಾಗಿ ತಂದೆ ,ತಾಯಿ ಇಟ್ಟ ಸುಂದರ ಹೆಸರು ನಮ್ಮ ನಮ್ಮ ಜೀವನದ ಉಸಿರು! ಜೀವನ ಹಸಿರಾಗುವುದು ಹೆಸರಿನಿಂದ, ವ್ಯಕ್ತಿತ್ವಕ್ಕೆ ಬೆಲೆ ಬರುವುದು ಹೆಸರಿನಿಂದ!

ಹೀಗೆ ಸ್ವಲ್ಪ ಈ ನಿಟ್ಟಿನಲ್ಲಿ ವಿಚಾರ ಮಾಡಿ ನೋಡಿ ನಮ್ಮ ಜೀವನ ಕೊನೆಗೊಳ್ಳುವವರೆಗಂತೂ ನಮ್ಮ ಹೆಸರು ನಮಗೆ ಬೇಕೇಬೇಕು! ಮುಂದೆ ನಾವು ಶಾಶ್ವತವಾಗಿ ಭೂಮಿ ಬಿಟ್ಟಾಗಲೂ ನಮ್ಮ ಹೆಸರಿನಿಂದ ನಮ್ಮ ಅಣ್ಣ , ತಮ್ಮಂದಿರು, ಅಕ್ಕಾ,ತಂಗಿಯರು, ಮಕ್ಕಳು ಎಲ್ಲರೂ ಬೇರೆಯವರಿಗೆ ಪರಿಚಯ ಹೇಳುವಾಗ ನಮ್ಮ ಹೆಸರನ್ನು ಹೇಳಿ ನಮ್ಮ ಪರಿಚಯದವರೊಂದಿಗೆ ಗುರುತಿಸಿಕೊಳ್ಳುತ್ತಾರೆ!

ಹೀಗಾಗಿ ಭೂಮಿಯಿಂದ ನಮ್ಮ ದೇಹ ಹೋದ ಮೇಲೂ ಶಾಶ್ವತವಾಗಿ ಉಳಿಯುವುದು ನಮ್ಮ ವ್ಯಕ್ತಿತ್ವ ಹಾಗು ನಮ್ಮ ಹೆಸರು!


ನಾಮ್ ಮೇ ಕ್ಯಾ ಹೈ, ಐಸೇ ಲೋಗ್ ಪುಛೇತೋ, ನಾಮ್ ಹೀ ಹಮಾರ ಜೀವನ್ ಕಾ ಪೆಹೆಚಾನ್ ಔರ್ ಇನಾಮ್ ಹೈ !

# ಮಾಘಮಾಸದ ಭಾರತ ಹುಣ್ಣಿಮೆ



ಭಾರತ ಹುಣ್ಣಿಮೆಯನ್ನು ವ್ಯಾಸಪೌರ್ಣಿಮೆ, ಮಾಘಹುಣ್ಣಿಮೆಯೆಂದು ಕರೆಯುತ್ತಾರೆ.ವೇದವ್ಯಾಸರು ಹಲವು ಬಾರಿ ಅವತಾರ ಎತ್ತಿದ್ದಾರೆ. ವೈಶಾಖ ಶುದ್ಧ ತ್ರಯೋದಶಿ,ವೈಶಾಖ ಪೌರ್ಣಮಿ,ಆಷಾಡ ಪೌರ್ಣಮಿ,ಕಾರ್ತಿಕ ಪೌರ್ಣಮಿ,ಮತ್ತು ಮಾಘಹುಣ್ಣಿಮೆ ಬೇರೆಬೇರೆ ಯುಗದಲ್ಲಿ ಬೇರೆ ಬೇರೆ ದಿನಗಳಂದು ಅವತರಿಸಿದ್ದಾರೆ.

ಅದರಲ್ಲಿ 28 ನೇಯ ದ್ವಾಪರಯುಗದಲ್ಲಿ ಪರಾಶರ ಸತ್ಯವತಿಯ ಮಗನಾಗಿ ಮಾಘ ಪೌರ್ಣಿಮೆದಿನದಂದು ಅವತರಿಸಿದ್ದು ಆ ದಿನವನ್ನೇ ವ್ಯಾಸಪೂರ್ಣಿಮಾ ಎಂದೂ ವ್ಯಾಸರು ಮಹಾಭಾರತ ಕತೃಗಳಾಗಿದ್ದರಿಂದ ಭಾರತಹುಣ್ಣಿಮೆಯಂದೂ ಕರೆಯಲಾಗುತ್ತದೆ. ಮಾಘಮಾಸದ ಶುಕ್ಲಪಕ್ಷದ ತ್ರಯೋದಶಿ ,ಚತುರ್ದಶಿ ಮತ್ತು ಹುಣ್ಣಿಮೆಯಂದು ಅಂತ್ಯ ಪುಷ್ಕರಣೀ ಇದ್ದು ಮಾಘಸ್ನಾನದ ಕಡೆಯದಿನವಾಗಿದೆ.



ಅಂದು ಅರಣೋದಯ ಕಾಲದಲ್ಲಿ ಎದ್ದು ಸ್ನಾನಮಾಡಿ ನಿತ್ಯಕರ್ಮಾನುಷ್ಟಾನ ಮಾಡಿ ದಾನಮಾಡುವದರಿಂದ ವಿಶೇಷಫಲವಿದೆ.ಈ ದಿನ ಮುತ್ತೈದೆಯರು ಮರದ ಬಾಗಿನ ಕೊಡುತ್ತಾರೆ.ಈ ದಿನದಂದೇ ತುಳಜಾಭವಾನಿಯ ಜನ್ಮದಿನವಾಗಿದ್ದು ಆ ಒಕ್ಕಲಿನವರು ವಿಶೇಷ ಪೂಜೆ ಸಲ್ಲಿಸುವರು. ಈ ದಿನದಂದು ನದಿಗಳ ಸ್ನಾನಕ್ಕೆ ಪ್ರಾಮುಖ್ಯತೆಯಿದೆ. ಪವಿತ್ರ ನದಿಗಳಾದ ಗಂಗಾ, ಯಮುನಾ, ಸರಸ್ವತಿ,ಸಿಂಧು,ಕಾವೇರಿ,ಗೋದಾವರಿ,ತುಂಗಾ ಮುಂತಾದಕಡೆ ಸ್ನಾನ ಮಾಡಿ ದಾನಮಾಡುವದರಿಂದ ವಿಷ್ಣುವಿಗೆ ಪ್ರೀತಿಯಾಗುತ್ತದೆ.

ನದಿಗೆ ಕಾಲಿಡುವ ಮೊದಲು ನೀರನ್ನು ನಮ್ಮ ಮೇಲೆ ಪ್ರೋಕ್ಷಿಸಿಕೊಳ್ಳಬೇಕು.ಭಾರತ ಹುಣ್ಣಿಮೆ ಅಂಗವಾಗಿ ಸಪ್ತಗುಡ್ಡಗಳ ವಿಶಾಲ ಪ್ರದೇಶದಲ್ಲಿ ಸವದತ್ತಿ ಎಲ್ಲಮ್ಮನ ಜಾತ್ರೆಗೆ ಭಕ್ತರ ದಂಡೇ ಹರಿದುಬರುತ್ತದೆ.ಅದಲ್ಲದೇ ಅಂದಿನ ದಿನ ತುಳಜಾಭವಾನಿಯ ಹುಟ್ಟುಹಬ್ಬದ ಪ್ರಯುಕ್ತ ದೇವಿಯ ಗೊಂದಲದ ಕಾರ್ಯಕ್ರಮಗಳೂ ಹಲವು ಕಡೆಗೆ ನೆರವೇರುತ್ತವೆ. ಗೊಂದಲ ಹಾಕುವವರನ್ನು ಗೊಂದಲಿಗರು ಎನ್ನುವರು.ಇವರ ಉಡುಗೆ ಅಂಗಿ ಇಲ್ಲವೇ ಜುಬ್ಬ.ಕಚ್ಚೆಪಂಚೆ,ತಲೆಗೆ ರುಮಾಲು ಇಲ್ಲವೇ ಟೋಪಿ ಗಂಡುಮಕ್ಕಳು ಧರಿಸಿದರೆ ಹೆಣ್ಣುಮಕ್ಕಳು ಕಚ್ಚೆ ಸೀರೆ,ರವಿಕೆ,ತಲೆಗೆ ಗಂಟು ಮಲ್ಲಿಗೆಹೂ,ಮೂಗಿನಲ್ಲಿ ನತ್ತು,ಕಿವಿಯಲ್ಲಿ ಬುಗುಡಿ,ಕೊರಳಿನಲ್ಲಿ ಗುಂಡಿನಸರ,,ಚಪಲಹಾರ ಧರಿಸಿರುತ್ತಾರೆ.ಅಂಬಾಭವಾನಿ ಮೂಲಸ್ಥಾನ ಮಹಾರಾಷ್ಟ್ರದ ತುಳಜಾಪುರ.

ಈ ದೇವತೆ ಕೆಲವರ ಮನೆಯಲ್ಲಿ ಕುಲದೇವತೆಯಾಗಿರುತ್ತಾಳೆ. ಕುಲದೇವತೆ ಇರುವ ಮನೆಯವರು ಪ್ರತೀವರ್ಷ ಭಾರತ ಹುಣ್ಣಿಮೆ, ದುರ್ಗಾಷ್ಟಮಿ,ಅಕ್ಷತದಿಗೆಯಂದು ಗೊಂದಲವೆನ್ನುವ ಕಾರ್ಯಕ್ರಮ ಮಾಡುತ್ತಾರೆ.

ಬಾಳೇದಿಂಡು,ಬಾಳೇಕಂಬ ,ಕಬ್ಬು,ಮಾವಿನಸೊಪ್ಪು,ಬೇವಿನಸೊಪ್ಪಿನಿಂದ ಅಲಂಕರಿಸಿದ ಮಂಟಪದಲ್ಲಿ ದೇವಿಯನ್ನು ಕೂಡಿಸಿ ವಾದ್ಯಗಳ ಮುಖಾಂತರ ದೇವಿಯನ್ನು ಆಹ್ವಾಹನೆ ನೀಡಿ ಗೊಂದಲನ ಜೋಡಿ ತಬಲ,ಚೌಡಿಕೆ ಪೂಜೆ ಮಾಡಿ ಅದಕ್ಕೂ ನೇವೃದ್ಯ ಮಾಡಿ ಗೊಂದಲಿಗರಿಗೆ ಉಣಬಡಿಸುತ್ತಾರೆ.ರಾತ್ರಿ ಅಲಂಕರಿಸಿದ ಮಂಟಪದಲ್ಲಿ ಮೂರು ಜನ ಒಬ್ಬ ಜೋಡುತಬಲ,ಒಬ್ಬ ಚೌಡಿಕೆ ಇನ್ನೊಬ್ಬ ಎಣ್ಣೆಯಲ್ಲಿ ಅದ್ದಿ ಬಟ್ಟೆಕಟ್ಟಿದ ಕೋಲಿನ ದೀಪದೊಂದಿಗೆ 11 ಗಂಟೆಯ ಮೇಲೆ ದೇವಿಯ ಕಥೆ ಪ್ರಾರಂಭಿಸಿ ಬೆಳಗಿನ ಜಾವ 5–30 ರ ಸುಮಾರಿಗೆ ಮುಗಿಸುತ್ತಾರೆ. ದೇವರಿಗೆ ಆರತಿ, ಬಂಡಾರಾರ್ಚನೆ,ಹಾಡುಗಳು ನೋಡುವ ಹಾಗೆ ಇರುತ್ತದೆ.

ಮದುವೆ, ಮುಂಜಿ, ಗೃಹಪ್ರವೇಶ ದಂತ ಕಾರ್ಯಕ್ರಮದ ನಂತರ ದೇವಿಯನ್ನು ಆರಾಧಿಸುವ ಗೊಂದಲವನ್ನು ಆಚರಿಸುತ್ತಾರೆ. ಕವಡೆಸರ ಕುಲದೇವರಿರುವ ಮನೆಯವರಿಗೆ ಹಾಕಿ ಬಂಡಾರ ಹಚ್ಚುವ ಪದ್ಧತಿ ಇರುತ್ತದೆ.ಭಾರತ ಹುಣ್ಣಿಮೆ ಆಚರಿಸಿ ದೇವಿಯ ಪೂಜೆ ಮಾಡಿ ಅವಳ ಆಶಿರ್ವಾದ ಪಡೆಯೋಣ.



ಗಿರಿಜಾ.ಎಸ್. ದೇಶಪಾಂಡೆ.
ಬೆಂಗಳೂರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,